ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 36 ಸೆಪ್ಟೆಂಬರ್ 6, 1981 ಬೆಲೆ : 60 ಪೈಸೆ

ಬಣ್ಣ ಬಯಲಾಯ್ತು

ಕಾರ್ಮಿಕರಿಗೆ ಸಿಗಬೇಕಾದ ಸಂಬಳ, ತುಟ್ಟಿಭತ್ತೆ ಏರಿಕೆ, ಬೋನಸ್ಸು ಮುಂತಾದ ಬೇಡಿಕೆಗಳಿಗೆ ಅಡ್ಡಿ ತರುವ ಯಾವ ಕ್ರಮವನ್ನೂ ಕೇಂದ್ರ ಸರಕಾರ ವಹಿಸುವುದಿಲ್ಲವೆಂಬುದಾಗಿ ಕೇಂದ್ರಸರಕಾರದ ವಕ್ತಾರರುಗಳ ಭರವಸೆಯು ಹುರುಳಿಲ್ಲದ್ದೆಂಬುದು ಇತ್ತೀಚಿಗೆ ಕೇಂದ್ರದ ಸರಕಾರಿ ನೌಕರರ ಮತ್ತು ಸರ್ಕಾರದ ಪ್ರತಿನಿಧಿಗಳ ಜತೆಗೆ ನಡೆದ ಮಾತುಕತೆಯಿಂದ ಸ್ಪಷ್ಟವಾಯಿತು. ಹಣದುಬ್ಬರ ಮತ್ತು ಬೆಲೆಏರಿಕೆಯನ್ನು ತಡೆಗಟ್ಟಲು ಸಂಪೂರ್ಣ ವಿಫಲಗೊಂಡ ಈ ಸರಕಾರ ದೇಶದ ಗುತ್ತೇದಾರಿ ಬಂಡವಾಳಶಾಹಿಗಳ ಹಿತರಕ್ಷಣೆ ಮಾಡಲು ಮತ್ತು ವಿಶ್ವಬ್ಯಾಂಕ್ ಮತ್ತಿತರ ಸಾಮ್ರಾಜ್ಯಶಾಹಿ ಸಂಸ್ಥೆಗಳ ಒತ್ತಡಕ್ಕೆ ಮಣಿದು ವೇತನ ಸ್ಥಗಿತಗೊಳಿಸುವ ತುರ್ತುಪರಿಸ್ಥಿತಿಯ ಕಾಲದಲ್ಲಿ ತಂದಿದ್ದ ಕ್ರಮವನ್ನೇ ಈಗ ಪುನಃ ಅನುಷ್ಠಾನಕ್ಕೆ ತರಲು ಸೂಚನೆ ತಂದಿದೆ. ಕಳೆದ ತಿಂಗಳು ತಾ. 29ರಂದು ನಡೆದ ಸಭೆಯಲ್ಲಿ ಈ ವರ್ಷದ ಏಪ್ರಿಲ್ ಮತ್ತು ಜೂನ್ ತಿಂಗಳಲ್ಲಿ ಸಿಗಬೇಕಾದ ಎರಡು ಕಂತಿನ ಅಧಿಕ ತುಟ್ಟಿಭತ್ತೆಯನ್ನು ನಗದು ರೂಪದಲ್ಲಿ ಕೂಡಲೇ ಕೊಡಬೇಕೆಂದು ಒತ್ತಾಯಪಡಿಸಿದಾಗ ಸರಕಾರದ ಪ್ರತಿನಿಧಿಯು ಇದರ ಅರ್ಧಭಾಗವನ್ನು ಕಡ್ಡಾಯ ಠೇವಣಿಯಲ್ಲಿಡಲು ನೌಕರರು ಒಪ್ಪಬೇಕೆಂದು ಸಲಹೆ ನೀಡಿದರಂತೆ. ಹಾಗೆನೇ ಏರಿದ ತುಟ್ಟಿಭತ್ತೆಯನ್ನು ಸಂಬಳದಲ್ಲಿ ವಿಲೀನಗೊಳಿಸುವ ವಿಷಯದಲ್ಲೂ ಭಿನ್ನಾಭಿಪ್ರಾಯ ಬಂದು ಮಾತುಕತೆಯನ್ನು ಮುಂದೂಡಲಾಗಿದೆ.

ಸಂಪಾದಕೀಯ

ಇದನ್ನು ನೋಡಿದರೆ ಮತ್ತು ಕೇಂದ್ರ ಹಣಕಾಸಿನ ಸಚಿವ ಶ್ರೀ ವೆಂಕಟರಾಮನ್‌ರವರು ಲೋಕಸಭೆಯಲ್ಲಿ "ಬೆಲೆಏರಿಕೆಗನುಗುಣವಾಗಿ ತುಟ್ಟಿಭತ್ತೆ ಕೊಡಲೇಬೇಕೆನ್ನುವುದೇನೂ ಇಲ್ಲ"ವೆಂದಿರುವುದು, ಬೆಂಗಳೂರಿನ ಕೇಂದ್ರದ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಕಾರ್ಮಿಕರಿಗೆ ಬೋನಸ್ಸಿನ ಬಗ್ಗೆ ಅನುಸರಿಸುತ್ತಿರುವ ಪ್ರತಿಗಾಮಿ ಧೋರಣೆ–ಇವೆಲ್ಲಾ ಸರಕಾರ ಕಾರ್ಮಿಕರ ಮೇಲೆ ನಡೆಸಲಿರುವ ಧಾಳಿಯ ಸೂಚನೆಗಳಾಗಿವೆ. ದೇಶ ರಕ್ಷಣಾ ಕಾನೂನು, ಮುಷ್ಕರಗಳನ್ನು ಪ್ರತಿಬಂಧಿಸುವ ಅಗತ್ಯ ಸೇವಾ ಆರ್ಡಿನೆನ್ಸ್, ಈಗ ವೇತನ ಸ್ಥಂಭನದ ಸಲಹೆ ಇವು ದೇಶದ ಕಾರ್ಮಿಕರ, ನೌಕರರ, ರೈತರ ಮತ್ತಿತರ ಜನತೆಯ ವಿರುದ್ಧ ಸಾರಿದ ಯುದ್ಧವೆಂದೇ ತಿಳಿಯಬಹುದು. ದಿನೇದಿನೇ ಬೆಲೆಗಳು ಗಗನಕ್ಕೇರುತ್ತಿರುವಾಗ, ರಾಜ್ಯಗಳ ಮುಖ್ಯಮಂತ್ರಿಗಳೇ ಕಾಳಸಂತೆಗೆ ಬಹಿರಂಗ ಪ್ರೋತ್ಸಾಹ, ಬೆಂಬಲಕೊಡುತ್ತಿರುವಾಗ, ಸಾಮಾನ್ಯ ಜನತೆಗೆ ಜೀವನ ನಡೆಸುವುದೇ ದುಸ್ಸರವಾಗಿರುವ ಈ ಸಮಯದಲ್ಲಿ ಬೆಲೆಏರಿಕೆಯನ್ನು ತಡೆಗಟ್ಟುವ ಬದಲು ಸರ್ಕಾರ ಬಂಡವಾಳಶಾಹಿಯನ್ನು ಬೆಳೆಸುವ ತನ್ನ ದಿವಾಳಿಕೋರ ನೀತಿಯನ್ನೇ ಅನುಸರಿಸುತ್ತಿದೆ. ಬೆಲೆಏರಿಕೆಗೆ ಕಾರ್ಮಿಕರಿಗೆ ಕೊಡುವ ಸಂಬಳ, ತುಟ್ಟಿಭತ್ತೆ ಕಾರಣವೆಂದೂ, ಇದನ್ನು ಮುಟ್ಟಹಾಕಿದರೆ ಹಣದುಬ್ಬರವನ್ನು ತಡೆಯಲು ಸಾಧ್ಯವೆಂಬ ಟೊಳ್ಳುವಾದವನ್ನು ಸರಕಾರ ಅನುಸರಿಸುತ್ತಿದೆ.

[ಕಡೇ ಪುಟ ನೋಡಿ]

ಪ್ರಧಾನಿಯ ಹೆಸರನ್ನು ಮುಂದೆಮಾಡಿ ಕೋಟ್ಯಾಂತರ ರೂ. ಸಂಗ್ರಹಿಸಿದ

ಭ್ರಷ್ಟಾಚಾರಿ ಅಂತುಳೆ

ಮಹಾರಾಷ್ಟ್ರದ ಮುಖ್ಯಮಂತ್ರಿ ಅಬ್ದುಲ್ ರಹಮಾನ್ ಅಂತುಳೆ ರಾಷ್ಟ್ರದ ಪ್ರಧಾನಿಯ ಹೆಸರನ್ನು ಮುಂದೆಮಾಡಿ ಕೋಟ್ಯಾಂತರ ರೂಪಾಯಿ ಹಣವನ್ನು ಸಂಗ್ರಹಿಸಿರುವ ಹಗರಣ ಬಯಲಾಗಿದೆ. ಇಂಡಿಯನ್ ಎಕ್ಸ್‌ಪ್ರೆಸ್‌ನ ವರದಿಗಾರ ಶ್ರೀ ಅರುಣ್ ಶೌರಿ ಈ ಷಡ್ಯಂತ್ರದ ಎಳೆ ಎಳೆಯನ್ನು ಬಯಲಿಗೆಳೆದಿದ್ದಾರೆ. ಶ್ರೀ ಅರುಣ್ ಶೌರಿಯವರ ವರದಿ ರಾಷ್ಟ್ರವನ್ನು ಅಲ್ಲೋಲಕಲ್ಲೋಲ ಮಾಡಿದೆ. ದೇಶದ ಜನತೆ ಈ ಹಗಲುದರೋಡೆಯ ವಿವರದಿಂದ ದಿಗ್ಭ್ರಾಂತರಾಗಿದ್ದಾರೆ.

ತನ್ನ ಪಕ್ಷದ ಅಧ್ಯಕ್ಷೆ ಹಾಗೂ ರಾಷ್ಟ್ರದ ಪ್ರಧಾನಿ ಶ್ರೀಮತಿ ಗಾಂಧಿಯವರ ಹೆಸರಿಗಿದೊಂದು ಟ್ರಸ್ಟ್ ಅಲ್ಲದೇ ಇನ್ನೂ ಕೆಲವು ಟ್ರಸ್ಟ್‌ಗಳನ್ನು ಪ್ರತಿಷ್ಠಾಪಿಸಿ ತನ್ನ ಸ್ಥಾನ ಬಲದಿಂದ ಅಂತುಳೆ ಹಣ ಸಂಗ್ರಹಿಸಿದ್ದಾರೆ. ಇಡೀ ಪ್ರಕರಣವನ್ನು ಬಯಲಿಗೆಳೆದ ಶ್ರೀ ಅರುಣ್‌ಶೌರಿ ನಿಜಕ್ಕೂ ಅಭಿನಂದನಾರ್ಹರು.

ಇಂದಿರಾ ಪ್ರತಿಭಾ ಪ್ರತಿಷ್ಠಾನಕ್ಕೆ ಅಧ್ಯಕ್ಷ ಅಂತುಳೆ, ಮಹಾರಾಷ್ಟ್ರದ ಹಣಕಾಸು ಮಂತ್ರಿ ರಾಮರಾವ್ ಅಧಿಕ್ ಮತ್ತು ಕಾರ್ಮಿಕಮಂತ್ರಿ ನರೇಂದ್ರ ತಿಡ್ಕೆ ಸದಸ್ಯರು. ತಮ್ಮ ಹೊಲಸು ಕೃತ್ಯವನ್ನು ಸಮರ್ಥಿಸಿಕೊಳ್ಳುತ್ತಿರುವ ಶ್ರೀಮಾನ್ ಅಂತುಳೆ ಅನ್ನುತ್ತಿರುವುದು "ನಿಧಿಸಂಗ್ರಹ ಬಡವರಿಗಾಗಿ" ಎಂದು.

ನಾಗರಿಕ ಸರಬರಾಜು ಖಾತೆಯ ವಶದಲ್ಲಿದ್ದ ಸಿಮೆಂಟ್ ವಿತರಣೆ ಅಧಿಕಾರ, ಕಂದಾಯ ಇಲಾಖೆಯ ಅಡಿಯಲ್ಲಿದ್ದ ಗೃಹ ನಿರ್ಮಾಣ ಸಂಸ್ಥೆಗಳಿಗೆ ಸರಕಾರಿ ಜಮೀನನ್ನು ಹಂಚುವ ಅಧಿಕಾರಗಳನ್ನು ಸ್ವತಃ ತಾನೇ ವಹಿಸಿಕೊಂಡು 'ಬಡವರಿಗಾಗಿ ಕಾಣಿಕೆ' ಯನ್ನು ಸುಲಿಯಲು ಅಂತುಳೆ ಪ್ರಾರಂಭಿಸಿದ್ದರು. ಅಭಾವಗಳಿಲ್ಲದ ಕಡೆ ಅಭಾವಗಳನ್ನು ಹುಟ್ಟುಹಾಕಿದರು. ಸಾರ್ವಜನಿಕರಿಗೆ ಮಾರಾಟ ಮಾಡುವ ಸಿಮೆಂಟಿನ ಪರಿಮಾಣವನ್ನು ಕಡಿಮೆ ಮಾಡಿದರು. ಸಿಮೆಂಟ್ ಬೆಲೆ ಗಗನಕ್ಕೇರಿತು. ಭಾರೀ ಕಟ್ಟಡವನ್ನು ಕಟ್ಟುವವರು ಸಿಮೆಂಟ್ ಕೊಳ್ಳುವಾಗ ಅಂತುಳೆಯವರ ಬಡವರ ದತ್ತಿಗಳಿಗೆ ಮೂಟೆಗೆ 40ರೂ. ಕೊಡುವಂತೆ ವ್ಯವಸ್ಥೆ ಮಾಡಿದರು. ಉದ್ಯಮಗಳಿಗೆ ಬೇಕಾಗುವ ಮಧ್ಯಸಾರದ ಕೋಟಾವನ್ನು ಖೋತಾಮಾಡಿದ್ದರಿಂದ ಬಳಕೆದಾರರು ಅಂತುಳೆಯ ದತ್ತಿಗೆ ಕಾಣಿಕೆ ನೀಡಬೇಕಾಯಿತು. ಉದ್ಯಮಗಳಿಗೆ ಮಧ್ಯಸಾರದೊರೆಯುವದು ದತ್ತಿಗೆ ಸಹಾಯ ಮಾಡುವದರ ಮೇಲೆ ಅವಲಂಬಿಸಿದೆ. ಮಹಾರಾಷ್ಟ್ರದಾದ್ಯಂತ ಹರಡಿರುವ ಸಕ್ಕರೆ ಕಂಪನಿಗಳಿಂದ ಅಪಾರ ಹಣ ಸುಲಿಯಲಾಯಿತು. ಸಾಂಗ್ಲಿಯ ಶೇತ್ಕರಿ ಸಹಕಾರಿ ಸಕ್ಕರೆ ಕಾರ್ಖಾನೆ ಪರವಾಗಿ ತಾವೇ 21.50ಲಕ್ಷ ರೂ.ಗ

[ಕಡೇ ಪುಟ ನೋಡಿ]

ದ. ಆಫ್ರಿಕಾದ ವರ್ಣೀಯ ಸರಕಾರದ ಪಾಶವೀ ಕ್ರಮ

ಅಂಗೋಲಾದ ಮೇಲೆ ದಾಳಿ

ದಕ್ಷಿಣ ಆಫ್ರಿಕಾದ ವರ್ಣೀಯ ಸರಕಾರವು ಯಾವುದೇ ಪ್ರಚೋದನೆಯೂ ಇಲ್ಲದೇ ಅಂಗೋಲಾದ ಮೇಲೆ ಧಾಳಿಮಾಡಿ ಅದರ ಕೆಲವು ಪ್ರದೇಶಗಳನ್ನು ಕೈವಶಮಾಡಿಕೊಂಡಿದೆ. ದ. ಆಫ್ರಿಕನ ಪಡೆಗಳು ಅಂಗೋಲಾದ ಜನತೆಯ ಮೇಲೆ ಬರ್ಬರ ದಬ್ಬಾಳಿಕೆ ನಡೆಸಿರುವುದೇ ಅಲ್ಲದೇ ಮಹಿಳೆಯರ ಮೇಲೆ ಮಾನಭಂಗ ಮಾಡಿರುವ ಆಘಾತಕರ ವರದಿ ಬಂದಿದೆ. ದ. ಆಫ್ರಿಕದ ವರ್ಣೀಯ ಸರಕಾರದ ಪಾಶವೀಕ್ರಮವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಉಗ್ರವಾಗಿ ಖಂಡಿಸಿದೆ.

ದಕ್ಷಿಣ ಆಫ್ರಿಕನ್ ಜನತೆಯ ಹೋರಾಟಗಳನ್ನು ಹತ್ತಿಕ್ಕುತ್ತಲಿರುವ ಪ್ರಿಟೋರಿಯಾದ ಆಡಳಿತವು ನಮೀಬಿಯಾದ ಸ್ವಾತಂತ್ರ್ಯ ಹೋರಾಟವನ್ನು ಸದೆಬಡೆಯಲು, ಅದರ ಸ್ವಾತಂತ್ರ್ಯವನ್ನು ನಿರಾಕರಿಸಿರುವ ಉದ್ದೇಶದಿಂದ ಮತ್ತು ತಾನು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡಿರುವ ಭೂಭಾಗದ ಮೇಲೆ ತನ್ನ ಸಾರ್ವಭೌಮತ್ವವನ್ನು ಸ್ಥಿರೀಕರಿಸುವ ಉದ್ದೇಶದಿಂದ ಅಂಗೋಲಾದ ಮೇಲೆ ಧಾಳಿ ನಡೆಸಿದೆ. ಈ ಧಾಳಿಯನ್ನು ವಿಶ್ವದ ಸಮಗ್ರ ಜನತೆಯು ಉಗ್ರವಾಗಿ ಖಂಡಿಸಿದ್ದರೂ ದ. ಆಫ್ರಿಕ ಸರಕಾರ ಕಣ್ಣು ತೆರೆದಿಲ್ಲ.

ದಕ್ಷಿಣ ಆಫ್ರಿಕದ ವರ್ಣೀಯ ಸರಕಾರಕ್ಕೆ ಅಮೇರಿಕನ್ ಸಾಮ್ರಾಜ್ಯಶಾಹಿಯು ಎಲ್ಲ ವಿಧದ ಸಹಾಯ ಸಹಕಾರ ಕೊಡುತ್ತಿದೆ. ಅಂಗೋಲಾದಲ್ಲಿ ಕ್ಯೂಬಾದ ಪಡೆಗಳಿವೆ ಮತ್ತು ರಶಿಯವು ಅಂಗೋಲಾಕ್ಕೆ ಶಸ್ತ್ರಾಸ್ತ್ರ ಪೂರೈಸುತ್ತಿದೆ ಎಂಬ ನೆಪವೊಡ್ಡಿ ಅಂಗೋಲಾದ ಮೇಲೆ ದ. ಆಫ್ರಿಕ ನಡೆಸಿದ ಧಾಳಿಯನ್ನು ಅಮೇರಿಕಾ ಪರೋಕ್ಷವಾಗಿ ಬೆಂಬಲಿಸಿದೆ.

ಅಂಗೋಲಾದ ಮೇಲೆ ದಕ್ಷಿಣ ಆಫ್ರಿಕಾ ನಡೆಸಿರುವ ಆಕ್ರಮಣವನ್ನು ಖಂಡಿಸುವಂಥ ಅಲಿಪ್ತ ರಾಷ್ಟ್ರಗಳ ನಿರ್ಣಯವೊಂದನ್ನು ಭಗ್ನಗೊಳಿಸಲು ಅಮೇರಿಕವು 1-9-81ರಂದು ನಡೆದ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಸಭೆಯಲ್ಲಿ ತನ್ನ ವಿಟೋ ಮತ ಚಲಾಯಿಸಿತು.

ವಿಟೋಹಕ್ಕು ಪಡೆದಿರುವ ಇತರ ನಾಲ್ಕು ಅಗ್ರರಾಷ್ಟ್ರಗಳ ಪೈಕಿ ಬ್ರಿಟನ್ ಮತದಾನದಲ್ಲಿ ಭಾಗವಹಿಸದೇ ತಟಸ್ಥವಾಗಿ ಉಳಿಯಿತು. ಫ್ರಾನ್ಸ್, ಚೀನಾ ಮತ್ತು ರಷ್ಯಾಗಳು ಅಮೇರಿಕಕ್ಕೆ ವಿರುದ್ಧವಾಗಿ ನಿರ್ಣಯದ ಪರವಾಗಿ ಮತಚಲಾಯಿಸಿದವು.

ಅಮೇರಿಕ ನಿರ್ಣಯವನ್ನು ವಿರೋಧಿಸಿದ ಬಗ್ಗೆ ವಿವರಣೆ ನೀಡಿದ ಅಮೇರಿಕಾ ರಾಯಭಾರಿ ಚಾರ್ಲ್ಸ್‌ಲಿಚೆನ್‌ಸ್ಟೀನ್ ಅವರು "ಘರ್ಷಣೆ, ಹಿಂಸಾಚಾರ ಹರಡಲು ದಕ್ಷಿಣ ಆಫ್ರಿಕಾ ಕಾರಣವೆಂದು ದೂಷಿಸಿ ಅದರ ಮೇಲೆ ಹೊಣೆಹೊರಿಸಲು ಯತ್ನಿಸುವ ನಿರ್ಣಯವನ್ನು ಅಮೇರಿಕಾ ಸಮರ್ಥಿಸಲು ಸಾಧ್ಯವಿಲ್ಲ" ಎಂದು ಸಮರ್ಥಿಸಿಕೊಂಡಿರುವರು. ಕಪ್ಪು ಜನತೆಯ ನ್ಯಾಯವಾದ ಹೋರಾಟವನ್ನು ಸದೆಬಡೆದು, ಮಾರಣಹೋಮ ಮಾಡುತ್ತಿರುವ ಅಮಾನವೀಯ ಪ್ರಿಟೋರಿಯಾ ಆಡಳಿತಕ್ಕೆ ಬೆಂಬಲ ನೀಡಿರುವ ಸಾಮ್ರಾಜ್ಯಶಾಹಿ ಅಮೇರಿಕಾದ ನೀತಿಮತ್ತೊಮ್ಮೆ ಸ್ಪಷ್ಟವಾಗಿದೆ. ಸಾಮ್ರಾಜ್ಯಶಾಹಿ ಅಮೇರಿಕದ ಧೋರಣೆಯನ್ನು

(ಕಡೇ ಪುಟ ನೋಡಿ)

ಭಾರತ ಪ್ರದಕ್ಷಿಣೆ

ಎನ್ಕೆ

ಶರದಪವಾರರ ಸ್ಪಷ್ಟ ನಿಲುವು

ದೇವರಾಜ ಅರಸರ ಸ್ಥಾನದಲ್ಲಿ ಶರದಪವಾರರವರು ಕಾಂಗ್ರೆಸ್ (ಯು) ಅಧ್ಯಕ್ಷರಾಗಿ ಬಂದಿರುವುದು ದೇಶದ ರಾಜಕೀಯಕ್ಕೆ ಹೊಸ ತಿರುವನ್ನು ನೀಡುವುದರಲ್ಲಿ ಸಂಶಯವಿಲ್ಲ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಒಂದಾಗಬೇಕೆಂಬ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನಿಲುವಿಗೆ ಶರದ ಪವಾರರವರ ದೃಢಸಂಕಲ್ಪ ಕಾಯಕಲ್ಪವಾಗಿ ಸರ್ವಾಧಿಕಾರಿ ಶಕ್ತಿಯನ್ನೆದುರಿಸಲು, ಪ್ರಜಾಪ್ರಭುತ್ವ ಉಳಿಸಲು ಹೆಚ್ಚಿನ ಸಹಾಯವಾಗಬಹುದು.

ಅರಸರವರು ಅಧ್ಯಕ್ಷರಾಗಿದ್ದಾಗ ಪ. ಬಂಗಾಲ ಹಾಗೂ ಇತರ ಪ್ರಾಂತಗಳ ಮುಖಂಡರು ತಮ್ಮದೇ ನಿಲುವು ತಾಳಿರುವುದನ್ನೂ, ಪ. ಬಂಗಾಲದಲ್ಲಿ ಇಂದಿರಾ ಕಾಂಗ್ರೆಸ್ ಜೊತೆ ಸೇರಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದ ಎಡ ಪ್ರಜಾಪ್ರಭುತ್ವ ರಂಗವನ್ನು ವಿರೋಧಿಸಿರುವುದನ್ನೂ ನೋಡಿದ್ದೇವೆ. ಆ ಪಕ್ಷದ ಯುವಕರೆಲ್ಲ ಮುಖಂಡತ್ವದ ಅನಿಶ್ಚಿತ ರಾಜಕೀಯ ಸಿದ್ಧಾಂತ, ನಿಲುವುಗಳ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿರುವುದನ್ನೂ ಕೇಳಿದ್ದೇವೆ. ಇಂಥ ಅನಿಶ್ಚಿತತೆಗೆ ಶರದ ಪವಾರರವರ ಚುನಾವಣೆ ಪೂರ್ಣವಿರಾಮವಾಗಬಹುದೆಂಬ ಆಶಯ.

"ತಮ್ಮ ಪಾರ್ಟಿ ಕಾರ್ಯಕರ್ತರಲ್ಲಿ ವಿಶ್ವಾಸ ಕುದುರಿಸಿ, ಪಾರ್ಟಿಯನ್ನು ಪುನರ್ರಚಿಸುವುದೇ" ತನ್ನ ಪ್ರಥಮ ಕರ್ತವ್ಯವೆಂದು ತಾವು ಅಧ್ಯಕ್ಷರಾದ ಕೂಡಲೇ ಶರದ ಪವಾರರವರು ಘೋಷಿಸಿದ್ದಾರೆ. ಇದರ ಜೊತೆಯಲ್ಲೇ ತನ್ನ ಪಾರ್ಟಿಯ ಭವಿಷ್ಯದ ಕುರಿತು ರಾಜಕೀಯ ಗೊಂದಲದಲ್ಲಿ ತೇಲಾಡುತ್ತಿದ್ದ ಪಾರ್ಟಿಯ ಕಾರ್ಯದರ್ಶಿಗಳಲ್ಲೊಬ್ಬರಾದ ಉನ್ನಿಕೃಷ್ಣನ್ ಅವರು ಶರದ ಪವಾರರವರು ಅಧ್ಯಕ್ಷರಾದ ಕೂಡಲೇ ತಮ್ಮ ಪತ್ರಿಕಾ ಪ್ರಕಟಣೆಯಲ್ಲಿ, ನಾಗರಿಕ ಹಕ್ಕು, ರಾಜ್ಯಗಳಿಗೆ ಸ್ವಾಯತ್ತತೆ ಮತ್ತು ಪ್ರಜಾಪ್ರಭುತ್ವ ಅಚ್ಚುಕಟ್ಟು, ಬೆಲೆಯೇರಿಕೆ, ನಿರುದ್ಯೋಗ ಸಮಸ್ಯೆಗಳ ಸಲುವಾಗಿ ಕಮ್ಯುನಿಸ್ಟ್ ಪಾರ್ಟಿಗಳನ್ನೊಳಗೊಂಡು ಎಲ್ಲಾ ವಿರೋಧಿ ಪಕ್ಷಗಳೊಡನೆ ಸೇರಿ, ಪಾರ್ಲಿಮೆಂಟಿನೊಳಗೂ, ವಿಧಾನಸಭೆಗಳೊಳಗೂ ಹಾಗೂ ಜನತೆಯ ಹೋರಾಟಗಳ ಮೂಲಕವೂ ಜನತೆಯನ್ನು ಹುರಿದೆಬ್ಬಿಸಿ ಚಳುವಳಿ ಹೂಡಲಾಗುವುದೆಂದು ಸಾರಿದ್ದಾರೆ.

ಸರ್ವಾಧಿಕಾರ ಶಕ್ತಿಯನ್ನು ವಿರೋಧಿಸಲು, ನಾಗರೀಕ ಹಕ್ಕಿನ ಸಂರಕ್ಷಣೆಗಾಗಿ ಮುಂತಾದ ಕೆಲವೇ ಬೇಡಿಕೆಗಳ ಕುರಿತು ಹೋರಾಟದಲ್ಲಿ ಭಾರತೀಯ ಜನತಾಪಾರ್ಟಿಯನ್ನು ಜೊತೆಯಲ್ಲಿ ಸೇರಿಸಿಕೊಳ್ಳಲಾಗುವುದಲ್ಲದೆ ಇತರ ವಿಷಯಗಳಲ್ಲಿಲ್ಲವೆಂಬುದನ್ನೂ ಶರದ ಪವಾರ ಅವರು ಸ್ಪಷ್ಟಪಡಿಸಿದ್ದಾರೆ.

ಇಂದಿರಾ ಕಾಂಗ್ರೆಸ್ಸನ್ನು ವಿರೋಧಿಸುವುದೇ ತನ್ನ ಪಾರ್ಟಿಯ ಸ್ಪಷ್ಟ ನಿಲುವೆಂಬುದನ್ನು ಸ್ಪಷ್ಟೀಕರಣ ಮಾಡಿದ್ದರಿಂದ ಬ. ಬಂಗಾಲದ ಪ್ರಿಯರಂಜನ ದಾಸ ಮುನ್ಶಿಯಂಥವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯನ್ನು ವಿರೋಧಿಸಲು ಕಾಂಗ್ರೆಯ ಜೊತೆ ಸೇರುವ ನಿಲುವನ್ನು ಬದಲಿಸಬೇಕಾಗುತ್ತದೆ.

ತನ್ನ ಪಾರ್ಟಿ ಕಾರ್ಯಕರ್ತರಲ್ಲಿ ವಿಶ್ವಾಸ ಉಂಟುಮಾಡುವ ದೃಷ್ಟಿಯಿಂದ ಕರ್ನಾಟಕದ ಪಾರ್ಟಿ ಅಧ್ಯಕ್ಷ ಚಂದ್ರೇಗೌಡರು ಇತ್ತೀಚೆಗೆ ಇಂದಿರಾ ಗಾಂಧಿ ಜೊತೆ ಮಾತಾಡಿದ್ದರ ಕುರಿತು ಸ್ಪಷ್ಟೀಕರಣ ಕೇಳುತ್ತಿದ್ದಂತೆಯೇ, ಅಧ್ಯಕ್ಷ ಸ್ಥಾನದಿಂದ ಅವರನ್ನು ತೆಗೆದು ಹಾಕಿ ಕೆ. ಹೆಚ್. ಶ್ರೀನಿವಾಸರನ್ನು ಚಂದ್ರೇಗೌಡರ ಸ್ಥಾನದಲ್ಲಿ ನೇಮಿಸಿ ಪಾರ್ಟಿ ಶಿಸ್ತು ಎಷ್ಟು ಅಗತ್ಯವೆಂಬುದನ್ನು ತೋರ್ಪಡಿಸಿದ್ದಾರೆ.

ಜೀವನಾವಶ್ಯಕ ವಸ್ತುಗಳ ಬೆಲೆ ದೈನಂದಿನ ಗಗನಕ್ಕೇರುತ್ತಿರುವಾಗ, ಇದರ ವಿರುದ್ಧ ನಡೆಯುವ ಹೋರಾಟವನ್ನು ಹತ್ತಿಕ್ಕಲು ಸರಕಾರ ಮುಷ್ಕರ ನಿಷೇಧ ಕಾಯ್ದೆಯಂಥ ಕ್ರಮಗಳನ್ನು ಕೈಗೊಳ್ಳುತ್ತಿರುವಾಗ, ಇಂದಿರಾ ಕಾಂಗ್ರೆಸ್ಸಿನ ಇಂಥ ಜನವಿರೋಧಿ ನೀತಿಯನ್ನು ವಿರೋಧಿಸಲು ಎಲ್ಲ ವಿರೋಧಿ ಪಕ್ಷಗಳ ಜೊತೆ ಸಹಕರಿಸುವುದಾಗಿ ಸಾರಿರುವ ಅರಸು ಕಾಂಗ್ರೆಸ್ ಅಧ್ಯಕ್ಷ ಶರದ ಪವಾರರವರ ನಿಲುವು ರೈತ-ಕಾರ್ಮಿಕರ ಜನತೆಯ ಹೋರಾಟಕ್ಕೆ ಹೊಸ ಜೀವ, ಹೆಚ್ಚಿನ ಶಕ್ತಿಕೊಡುತ್ತದೆಂದು ಆಶಿಸೋಣ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದಲ್ಲಿ ಸತತವಾಗಿ ನಡೆಯುತ್ತಿರುವ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ವಿಜಯವೆಂದು ಪರಿಗಣಿಸೋಣ.

ಇಂದಿರಾಗಾಂಧಿಯವರ ಮಾತಿಗೆ ಎಷ್ಟು ಬೆಲೆ

ಪ. ಬಂಗಾಲದ ಮುಖ್ಯಮಂತ್ರಿ ಜ್ಯೋತಿಬಸುರವರು ಇಂದಿರಾಗಾಂಧಿಯವರನ್ನು ಭೇಟಿಯಾದ ನಂತರ ಕೆಲವು ಪತ್ರಿಕೋದ್ಯಮಿಗಳು ಪ. ಬಂಗಾಲದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದ ಎಡ ರಂಗದ ಸರಕಾರವನ್ನು ಕಿತ್ತೊಗೆಯಲಾಗುವುದೇ ಎಂದು ಕೇಳಿದಾಗ ಆ ಮಹಾಮಾತೆ ಸಿಟ್ಟಿನಿಂದ ಹೇಳಿದರು "ಈ ಪ್ರಶ್ನೆಗೆ ಎಷ್ಟು ಸಲ ಜವಾಬು ನೀಡಲಾಗಿದೆ. ವಿರೋಧಿ ಪಕ್ಷದ ಯಾವ ಸರಕಾರವನ್ನೂ ನಾನು ವಿಸರ್ಜಿಸುವುದಿಲ್ಲ. ಇದು ಸ್ಪಷ್ಟ ಮಾತು".

ವಿರೋಧೀ ಪಕ್ಷಗಳ ಯಾವ ಸರಕಾರವನ್ನೂ ಉರುಳಿಸುವುದಿಲ್ಲೆಂದು ಇಂದಿರಾಗಾಂಧಿ ಹೇಳುತ್ತಲೇ ಇರುವಾಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯವರು ತಮ್ಮ ಸರಕಾರಗಳನ್ನು ಇಂದಿರಾ ತೆಗೆದೇತೆಗೆಯುತ್ತಾಳೆಂದು ಹೇಳುವುದರಲ್ಲಿ ಅರ್ಥವೇನಿದೆಂದು ಜನರು ಕೇಳುವುದರಲ್ಲಿ ಅರ್ಥವಿಲ್ಲದಿಲ್ಲ. ಪಾಪ, ಈ ಜನರಿಗೆ ಇಂದಿರಾ ಭಾಷೆಯ ಒಳಾರ್ಥ ತಿಳಿಯುವುದಾದರೂ ಹೇಗೆ?

ಕೇರಳದಲ್ಲಿ ಕಾಂ. ನಂಬೂದರಿಪಾದ್ ರವರು ಮುಖ್ಯಮಂತ್ರಿಯಾಗಿದ್ದ ಕಮ್ಯುನಿಸ್ಟ್ ಸರಕಾರವನ್ನು ಉರುಳಿಸುವುದಿಲ್ಲೆಂದು ಹೇಳುತ್ತಿದ್ದಂತೆಯೇ 1959ರಲ್ಲಿ ದೇಶದಲ್ಲಿ ಪ್ರಥಮ ಸಲ ರಚಿಸಲ್ಪಟ್ಟ ಕಮ್ಯುನಿಸ್ಟ್ ಸರ್ಕಾರವನ್ನು ವಿಸರ್ಜನೆ ಮಾಡಿದವರು ಇಂದಿರಾ ಗಾಂಧಿ. 1975ರಲ್ಲಿ ನಾಗರಿಕ ಹಕ್ಕುಗಳಿಗೆ ಅಡ್ಡಿ ಆತಂಕ ಒಡ್ಡುವುದಿಲ್ಲೆಂದು ಸಾರುತ್ತಿದ್ದಂತೆಯೇ ತುರ್ತುಪರಿಸ್ಥಿತಿಯನ್ನು ಹೇರಿದವರೂ ಇಂದಿರಾಗಾಂಧಿಯೇ. ಅಸ್ತಿತ್ವದಲ್ಲಿದ್ದ ವಿರೋಧಿ ಪಕ್ಷಗಳ ಸರಕಾರಗಳನ್ನು ಕಿತ್ತೊಗೆಯುವುದಿಲ್ಲೆಂದು ಹೇಳುತ್ತ, ತಾನು ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ 9 ರಾಜ್ಯಗಳ ಸರಕಾರಗಳನ್ನು ವಿಸರ್ಜಿಸಿ 1980ರಲ್ಲಿ ಚುನಾವಣೆ ನಡೆಸಿದವರೂ ಇವರಲ್ಲವೇ? ಜನತಾ ಸರಕಾರ ನೇಮಿಸಿದ ಯಾವ ಗವರ್ನರರನ್ನೂ ತೆಗೆಯುವುದಿಲ್ಲೆಂದು ಹೇಳುತ್ತಿದ್ದಂತೆಯೇ ತನ್ನ ಮಾತನ್ನು ಕೇಳದ ತಿಲಕ ಮೊದಲಾದ ಗವರ್ನರರನ್ನು ಮುನ್ಸೂಚನೆಯಿಲ್ಲದೆ ಮನೆಗೆ ಕಳುಹಿಸಿದವರೂ ಇವರೇ.

ತನ್ನ ಅಖಂಡ ಆಡಳಿತೆಗೆ ಪಶ್ಚಿಮ ಬಂಗಾಲದ ಜ್ಯೋತಿಬಸು ಸರಕಾರ ಮುಳ್ಳಾಗಿದ್ದು, ಮುಂಬರುವ ಚುನಾವಣೆಯೊಳಗಾಗಿ ಆ ಸರಕಾರವನ್ನು ವಿಸರ್ಜಿಸುವಂತೆ ವರದಿ ಮಾಡುವ ಗವರ್ನರ್ ಇಂದಿರಾಗಾಂಧಿಗೆ ಬೇಕಾಗಿದ್ದು, ಪ. ಬಂಗಾಲದ ಗವರ್ನರ್ ಸಿಂಗ್ ಅವರು ಇಂದಿರಾ ಗಾಂಧಿಯ ತಾಳಕ್ಕೆ ತಕ್ಕಂತೆ ಕುಣಿಯಲು ನಿರಾಕರಿಸುತ್ತಿರುವುದರಿಂದ ಅವರ ಬದಲಾವಣೆಯಾಗಲಿತ್ತು. ಈಗ ಶ್ರೀ ಸಿಂಗ್ ರಾಜೀನಾಮೆ ಕೊಟ್ಟಿದ್ದಾರೆ. ತನ್ನ ಪಕ್ಷವನ್ನು ಅಧಿಕಾರಕ್ಕೆ ತರಲು ಎಂಥ ಕುತಂತ್ರ ಹೂಡಲೂ ಈ ಹೆಂಗಸು ತಯಾರಿರುವುದರಿಂದ, ಪ. ಬಂಗಾಲ, ಕೇರಳ, ತ್ರಿಪುರಾ ಸರಕಾರಗಳನ್ನು ಉರುಳಿಸುವ ಹೊಂಚಿನ ವಿರುದ್ಧ, ಆ ಸರಕಾರಗಳ ಸಂರಕ್ಷಣೆಗಾಗಿ ಎಲ್ಲ ವಿರೋಧೀ ಪಕ್ಷಗಳೂ, ಪ್ರಜಾಪ್ರಭುತ್ವ ಜನತೆಯೂ ಹೋರಾಡುವುದಗತ್ಯ. ಇಂದಿರಾ ಗಾಂಧಿಯ ಒಳಸಂಚಿಗೆ ಜನತೆಯ ಹೋರಾಟವೇ ಮದ್ದು. ಇಂದಿರಾ ಗಾಂಧಿಯ ಮೋಸದ ಮಾತಿಗೆ ಬಲಿಯಾಗುವುದು ಅಪಾಯಕಾರಿ.

ಇಂದಿರಾ ಕಾಂಗ್ರೆಸ್ಸಿನಲ್ಲಿ ಬಂಡಾಯ

ತನ್ನ ಪಾರ್ಟಿಯೊಳಗಿನ ಭಿನ್ನಮತೀಯ ಗುಂಪನ್ನು ಹತ್ತಿಕ್ಕಲಾಗುವುದೆಂದು ರಾತ್ರಿ ಹಗಲೆನ್ನದೆ ಇಂದಿರಾ ಗಾಂಧಿಯವರು ಘೋಷಿಸುತ್ತಿದ್ದಂತೆಯೇ, ಕೇಂದ್ರ-ರಾಜ್ಯಮಂತ್ರಿಗಳ ಬೆಂಬಲದಿಂದಲೇ ತನ್ನ ಪಾರ್ಟಿಯವರೆಲ್ಲ ಮಾರಾಮಾರಿ ಮಾಡಿಕೊಳ್ಳುತ್ತಿರುವ ಸುದ್ದಿಗಳಿಂದ ಇಂದಿರಾಗಾಂಧಿಗೆ ವಿಮಂಚನೆಯಾಗಿದೆಯಂತೆ. ಇಂದಿರಾ ಪಾರ್ಟಿಯ ಕಾರ್ಯದರ್ಶಿಯವರು ಗುಜರಾತ್ ರಾಜ್ಯದ ಪರಿಸ್ಥಿತಿ ಅಭ್ಯಸಿಸಲು ಹೋದಾಗ ಎರಡೂ ಗುಂಪುಗಳೊಳಗೆ ಜಗಳವಾಗಿ ಪೋಲೀಸರು ಲಾಠಿಚಾರ್ಜ್ ಮಾಡುವಂತಾಗಿದೆ. ಇದರಲ್ಲಿ ಕೇಂದ್ರದ ಆರ್ಥಿಕ ಮಂತ್ರಿ ಬಾರೊಟ ಅವರ ಕೈವಾಡವಿತ್ತಂತೆ.

ಹಾಗೆಯೇ ತಾನು ಅತ್ಯಂತ ಬಲಿಷ್ಠನಾಗಿದ್ದೇನೆಂದು ಗುಂಡೂರಾವ್ ಹೇಳುತ್ತಿದ್ದಂತೆಯೇ, ಇಂದಿರಾಗಾಂಧಿ ಎಚ್ಚರಿಕೆ ನೀಡುತ್ತಿದ್ದಂತೆಯೇ ಬಂಗಾರಪ್ಪ ಪರ ಹಲವಾರು ವಿಧಾನಸಭೆ ಸದಸ್ಯರು ದಿಲ್ಲಿ ಪ್ರಯಾಣ ಬೆಳೆಸಿದ್ದಾರಂತೆ. ಮಹಾರಾಷ್ಟ್ರ, ಉತ್ತರಪ್ರದೇಶ, ಪಂಜಾಬಗಳಿಂದಲೂ ಭಿನ್ನಮತೀಯರ ದಿಲ್ಲಿಯಾತ್ರೆ ನಡೆದೇ ಇದೆ. ಇವರಿಗೆ ಯಾರ ಅಂಜಿಕೆಯೂ ಇಲ್ಲ. ಕೆಲವು ಪ್ರಬಲ ಕೇಂದ್ರದ ಮುಖಂಡರ ಬೆಂಬಲದಿಂದಲೇ ದಿಲ್ಲಿ ಪ್ರಯಾಣಗಳು ನಡೆಯುತ್ತಿವೆಯಂತೆ. ಇಂದಿರಾ ಪ್ರಭಾವ ಪಾರ್ಟಿಯಲ್ಲಿ ಕಡಿಮೆಯಾಗುತ್ತಿದೆಂಬುದಕ್ಕೆ ಇದು ಉದಾಹರಣೆಯೇ? ಅಥವಾ ಒಂದು ರಾಜ್ಯದಲ್ಲಿ ಒಂದು ಗುಂಪನ್ನೇ ಬಲಗೊಳಿಸಬಾರದೆಂಬ ವಿಚಾರವೇ? ಅಂತೂ ಅಧಿಕಾರಕ್ಕಾಗಿ ಕಚ್ಚಾಟ ನಡೆಯುವಾಗ ಯಾರ ಅಂಜಿಕೆಯೂ ಅಡ್ಡಿಬರುವದಿಲ್ಲೆಂಬುದನ್ನು ಇದು ಸೂಚಿಸುತ್ತದೆ. ಇಂಥ ಪರಿಸ್ಥಿತಿಯಲ್ಲಿ ಜನರ ಮಧ್ಯೆ ಸಂಘಟನೆ ಬೆಳೆಸುವುದು ಅತ್ಯಗತ್ಯ. ಎಡ-ಪ್ರಜಾಪ್ರಭುತ್ವ ಪಕ್ಷಗಳು ಇದರ ಸದುಪಯೋಗ ಮಾಡಿಕೊಳ್ಳಲು ಮುಂದಾಗಬೇಕು.

ಭೀರೇಂದ್ರಸಿಂಗ್ ಭುಜ ತಟ್ಟಿಕೊಂಡರು

ಲೋಕಸಭೆಯಲ್ಲಿ ಕೇಂದ್ರ ಆಹಾರ ಮಂತ್ರಿ ಭೀರೇಂದ್ರಸಿಂಗ್ ಹೇಳಿದಂತೆ ಹುಮ್ಮಸದಿಂದ ಬೆಲೆ ಇಳಿಯುತ್ತಾ ಇದೆ. ಸಕ್ಕರೆಯ ಬೆಲೆ ಕೆ. ಜಿ. ಗೆ ರೂ. 6-50ಕ್ಕೆ ಸ್ಥಿರಗೊಳ್ಳುತ್ತದೆಂದು ತಮ್ಮ ಸರ್ಕಾರದ ಪ್ರಯತ್ನದಿಂದಲೇ ಈ ಮಹಾಕಾರ್ಯ ಸಾಧಿಸಿದ್ದೇವೆಂದರಂತೆ. ವಾಸ್ತವ ಪರಿಸ್ಥಿತಿ ಭೀರೇಂದ್ರಸಿಂಗರ ಹೇಳಿಕೆಗೆ ವಿರುದ್ಧವಾಗಿದ್ದರೂ ಕೂಡ ಭೀರೇಂದ್ರಸಿಂಗರು ತಮ್ಮ ಭುಜವನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ. ಜನತಾ ಸರ್ಕಾರದಲ್ಲಿ ಕೆ.ಜಿ. ಒಂದಕ್ಕೆ ರೂ. 2ರಂತೆ ಸಕ್ಕರೆ ಲಭ್ಯವಾಗುತ್ತಿದ್ದು ಇಂದಿರಾ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಕೆ.ಜಿ.ಗೆ ರೂ. 20ರಂತೆ ಮಾರಾಟವಾಗುತ್ತಿತ್ತು. ಸಕ್ಕರೆ ಉತ್ಪಾದಕರಿಂದ ಸಾಕಷ್ಟು ಹಣ ಸಂಪಾದಿಸಿ ಬೊಕ್ಕಸ ತುಂಬಿಸಿಕೊಂಡ ಭೀರೇಂದ್ರಸಿಂಗರು ಕೆ.ಜಿ.ಗೆ 4 ರೂಪಾಯಿಗೂ ಕಡಿಮೆ ಬೆಲೆಯಲ್ಲಿ ಮಾರಾಟವಾಗಬೇಕಾದ ಸಕ್ಕರೆಯ ಬೆಲೆಯನ್ನು ಆರೂವರೆ ರೂಪಾಯಿಗೆ ಸ್ಥಗಿತಗೊಳಿಸುತ್ತೇನೆಂದು ಜುಂಭಕೊಚ್ಚಿಕೊಳ್ಳುತ್ತಿರುವುದು ನಾಚಿಕೆಗೇಡು. ಮಹಾರಾಷ್ಟ್ರದ ಸಕ್ಕರೆ ಉತ್ಪಾದಕರಿಂದ ಹಣ ಪಡೆಯುತ್ತಿದ್ದೇನೆಂದು ವಿಧಾನ ಸಭೆಯಲ್ಲಿ ಮುಖ್ಯಮಂತ್ರಿ ಅಂತುಳೆಯವರು ಸಾರಿರುವಾಗ, ಸಕ್ಕರೆಯ ಬೆಲೆ ನಿರ್ಣಯಿಸುವ ಹಕ್ಕು ಭೀರೇಂದ್ರಸಿಂಗರ ಅಂಕಿತದೊಳಗಿಲ್ಲೆಂಬ ಸಂಗತಿ ಈಗಾಗಲೇ ಜಗಜ್ಜಾಹೀರವಾಗಿದೆ. ಮಂತ್ರಿಗಳ ಮಾತನ್ನು ಮಂಕುತಿಮ್ಮನೂ ತಿಳಿದುಕೊಂಡಿದ್ದಾನೆ. ಹೆದರುವ ಕಾರಣವಿಲ್ಲ, ಹೊಡೆದಾಡುವುದೊಂದೇ ಕೆಲಸ.

●

ಕಾರ್ಮಿಕ ಸಂಘದ ವಿಶೇಷ ಸಭೆ

ಬೆಂಗಳೂರಿನ ಕ್ವಾಲಿಟಿ ಬಿಸ್ಕಟ್ ಕಾರ್ಮಿಕಸಂಘದ ವಿಶೇಷ ಸರ್ವಸದಸ್ಯರ ಸಭೆ 9-8-81ರಂದು ಕಾಂ. ಸೂರ್ಯನಾರಾಯಣರಾವ್‌ರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಂ. ಬೀರಣ್ಣ ಎಲ್ಲರನ್ನೂ ಸ್ವಾಗತಿಸಿದರು. ಆರಂಭದಲ್ಲಿ ಇತ್ತೀಚೆಗೆ ನಿಧನಹೊಂದಿದ ಕಾಂ. ಭೂಪೇಶ್‌ಗುಪ್ತರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿ ಒಂದು ನಿಮಿಷ ಮೌನವನ್ನು ಆಚರಿಸಲಾಯಿತು.

ಯೂನಿಯನ್ನಿನ ಪ್ರಧಾನಕಾರ್ಯದರ್ಶಿ ಕಾಂ. ಆರ್. ಶ್ರೀನಿವಾಸ್ ಅವರು ಸಭೆಯ ಮುಂದೆ ವರದಿಯನ್ನು ಮಂಡಿಸಿದರು. ವರದಿಯ ಮೇಲೆ ನಡೆದ ಚರ್ಚೆಯಲ್ಲಿ 20 ಕಾರ್ಮಿಕರು ಪಾಲ್ಗೊಂಡಿದ್ದರು. ನಂತರ ವರದಿಯು ಅಂಗೀಕಾರವಾಯಿತು. ಕಾಂ. ಸೂರ್ಯನಾರಾಯಣ

[ಕಡೇ ಪುಟ ನೋಡಿ]

ಜಗತ್ತಿನ ಸುತ್ತಮುತ್ತ

“ಕೊಲೆಗಾರರ ಸ್ವರ್ಗ” - ಗ್ವಾಟೆಮಾಲಾ

1954ರಲ್ಲಿ ಅಧ್ಯಕ್ಷ ಅರ್ಜೆಂಜ್‌ರ ಜನವಾದೀ ಆಡಳಿತವನ್ನು ಅಮೇರಿಕಾದ ಗುಪ್ತಚರ ವಿಭಾಗ ಸಿ.ಐ.ಎ. ಯ ಕೂಲಿಸೈನಿಕರು ಉರುಳಿಸಿದ ದಿನದಿಂದ ಆದೇಶದಲ್ಲಿನ ದಮನ ಹಾಗೂ ಹಿಂಸೆಯ ಕ್ರೂರ ವಾತಾವರಣವನ್ನು ಫ್ರೆಂಚ್ ಪತ್ರಿಕೆಯೊಂದರ ವರದಿಗಾರರು ಮೇಲಿನಂತೆ ವರ್ಣಿಸಿದ್ದಾರೆ. ಮಧ್ಯ ಅಮೇರಿಕಾದ ಗಣತಂತ್ರವಾಗಿದ್ದ ಗ್ವಾಟೆಮಾಲಾ ಈಗ ಅತೀ ಬಲಪಂಥೀಯ ಪ್ರತಿಕ್ರಿಯಾವಾದೀ ಮಿಲಿಟರಿ ಸರ್ವಾಧಿಕಾರಿ, 1978 ರಿಂದ ತನ್ನನ್ನೇ ಅಧ್ಯಕ್ಷನೆಂದು ಸಾರಿಕೊಂಡ ಲೂಕಾಸ್ ಗಾರ್ಸಿಯಾನ ಪಾಶವೀ ಹಿಡಿತದಲ್ಲಿ ವಿಲವಿಲ ಒದ್ದಾಡುತ್ತಿದೆ. ಈತ ಅಧ್ಯಕ್ಷನಾದ ದಿನದಿಂದ ಇದುವರೆಗೆ ಆರು ಸಾವಿರಕ್ಕೂ ಹೆಚ್ಚು ಜನರ ರಾಜಕೀಯ ಕೊಲೆಯಾಗಿದೆಯೆಂದು ವಿಶ್ವಾಸಾರ್ಹ ಮೂಲಗಳು ತಿಳಿಸುತ್ತವೆ. 1954 ರಿಂದೀಚೆಗೆ ರಾಜಕೀಯ ಕಾರಣಗಳಿಗಾಗಿ ಹಂತಕರ ಗುಂಡುಗಳಿಗೆ ಬಲಿಯಾದವರ ಸಂಖ್ಯೆ ಐವತ್ತು ಸಾವಿರಕ್ಕೂ ಹೆಚ್ಚಿರಬಹುದಂತೆ! ಈ ಕೊಲೆಗಳ ಬಗ್ಗೆ ಗ್ವಾಟೆಮಾಲಾದ ಸರಕಾರೀ ಪತ್ರಿಕೆಗಳಲ್ಲೂ ವರದಿ ಬರುತ್ತದೆ. ಆದರೆ “ಹಂತಕರ ಸುಳಿವು ಸಮಾಚಾರ ತಿಳಿದಿರುವುದಿಲ್ಲ”. ವಾಸ್ತವವಾಗಿ ಪೋಲೀಸ್ ಹಾಗೂ ಸೈನಿಕ ಸಮವಸ್ತ್ರದಲ್ಲಿರುವ ಅಥವಾ ಕೆಲವು ಅತೀ ಬಲಪಂಥೀಯ ಅರೆಸೈನಿಕ ಸಂಘಟನೆಗಳ ಸದಸ್ಯರಾಗಿರುವ ಈ ಕೊಲೆಗಾರರು ಅಧ್ಯಕ್ಷ ನಾಮಧಾರೀ ಸರ್ವಾಧಿಕಾರಿಯ ನಿರ್ದೇಶನದಲ್ಲೇ ಇದನ್ನು ನಡೆಸುತ್ತಾರೆ.

“ಜಾಗೃತರಾಗಿ! ಗ್ವಾಟೆಮಾಲಾದ ಜನರೇ ಜಾಗೃತರಾಗಿ! ನಿಮಗೆ ಅತ್ಯಂತ ಪ್ರಿಯವಾದುದನ್ನು ನಿಮ್ಮಿಂದ ಕಸಿದುಕೊಳ್ಳಬೇಕೆಂದು ಅಂತರರಾಷ್ಟ್ರೀಯ ಸಾಮ್ಯವಾದ ಬಯಸುತ್ತಿದೆ. ಅದು ನಿಮ್ಮ ಕೆಲಸವನ್ನು ನಾಶಗೊಳಿಸಬಯಸುತ್ತದೆ. (ಹಿಂಸ್ರವಾಗಿ ಕಾಟುಹೊಡೆದ ನಗುತ್ತಿರುವ ಗಾರೆ ಕೆಲಸದವನ ಚಿತ್ರ ಬರುತ್ತದೆ) ನಿಮ್ಮ ಸಂಪ್ರದಾಯಗಳನ್ನು ನಾಶಮಾಡಬಯಸುತ್ತಿದೆ (ಹಳ್ಳಿಯ ಹಬ್ಬವೊಂದರ ಕಾಟುಹೊಡೆದ ದೃಶ್ಯ) ಹಾಗೂ ನಿಮ್ಮ ನಂಬಿಕೆಗಳನ್ನು ನಾಶಮಾಡಬಯಸುತ್ತಿದೆ (ಕಾಟುಹೊಡೆದ ಚರ್ಚಿನ ಚಿತ್ರ).” ಗ್ವಾಟೆಮಾಲಾದ ಒಂದು ಟಿ. ವಿ. ಕಾರ್ಯಕ್ರಮದ ಅಂಶವಿದು. ಇದಾದ ನಂತರ ಅಮೇರಿಕಾ ಸಂಯುಕ್ತ ಸಂಸ್ಥಾನ (ಯು.ಎಸ್.ಎ.)ದ ನಕಾಶೆ ಟಿ. ವಿ. ಪರದೆಯ ಮೇಲೆ ಬರುತ್ತದೆ. ನಿಕಾರಾಗುವಾದ ಕಡೆಯಿಂದ ಮೋಡಗಳು ಆ ನಕಾಶೆಯನ್ನು ಆವರಿಸಿಕೊಳ್ಳುತ್ತವೆ; ಕ್ಯೂಬಾದ ಕಡೆಯಿಂದ ಮಿಂಚು ಪಳಪಳಿಸಲಾರಂಭಿಸುತ್ತದೆ. ನಂತರ ಫಿಡೆಲ್ ಕಾಸ್ಟ್ರೋರವರ ಕ್ಲೋಸ್ ಅಪ್. ಆಮೇಲೆ ರೀಗನ್‌ರ ಫೋಟೋ—“ನಾವು ಬಿಡುವುದಿಲ್ಲ...” ಎಂಬ ಮಾತುಗಳು; ಕೊನೆಗೆ, ಸೈನಿಕರು ಮಕ್ಕಳ ಬೆನ್ನುತಟ್ಟುವ ಚಿತ್ರ. ಅಂತ್ಯದಲ್ಲಿ ವಿವರಣಾಕಾರನ ‘ಹೃದಯ ತುಂಬಿದ’ ಭರವಸೆ-“ನಿಮ್ಮ ಸೇನೆ ನಿಮ್ಮನ್ನು ಕಾಪಾಡುತ್ತದೆ”.

ಜನತೆಯನ್ನು ಕಾಪಾಡುವ ಈ ರೀತಿಯೆಂದರೆ 25 ವರ್ಷಗಳಲ್ಲಿ 50 ಸಾವಿರ ಜನರ ರಾಜಕೀಯ ಕೊಲೆ ಮಾಡುವುದು. ಮೊದಮೊದಲು ಈ ಭೇಟಿ ಕೇವಲ ಎಡಪಂಥೀಯರ ವಿರುದ್ಧ ಮಾತ್ರವಿತ್ತು. ಈಗ ಸರಕಾರದೊಡನೆ ಸಹಕರಿಸಲು ಒಪ್ಪದ ಬೂರ್ಜ್ವಾ ರಾಜಕಾರಣಿಗಳು, ಗ್ರಾಮಾಂತರ ಸಹಕಾರೀ ಸಂಘಗಳ ಸಕ್ರಿಯ ಕಾರ್ಯಕರ್ತರು, ಕಾರ್ಮಿಕ ಮುಂದಾಳುಗಳು, ಅಧ್ಯಾಪಕರು, ಪತ್ರಕರ್ತರು, ಪುರೋಹಿತರು ಎಲ್ಲರೂ ಭೇಟಿಪಶುಗಳು. “ಇಂತಹವರೆಲ್ಲಾ ನಾಯಕರು. ಆದ್ದರಿಂದ ಕಮ್ಯೂನಿಸ್ಟರಾಗುವ ಶಕ್ಯತೆಯಿರುವವರು”—ಇದೇ ಸರ್ವಾಧಿಕಾರೀ ಸರಕಾರದ ಸರಳ ತರ್ಕ.

ಜನತೆಯ ‘ರಕ್ಷಣೆ’ಯಲ್ಲಿ ಗ್ವಾಟೆಮಾಲಾದ ಪ್ರತಿಕ್ರಿಯಾವಾದಿಗಳು ಉಪಯೋಗಿಸುವ ವಿಧಾನಗಳು- ವಿದ್ಯುತ್ ಪ್ರವಾಹ ಹರಿಯುತ್ತಿರುವ ನೀರಿನಲ್ಲಿ ಮುಳುಗಿಸುವುದು, ಅತೀ ಸಮೀಪದಿಂದ ಗುಂಡುಹಾರಿಸುವುದು ಕೀಟನಾಶಕಗಳಿಂದ ತುಂಬಿದ ಚೀಲದೊಳಗೆ ಮುಖವನ್ನು ತಳ್ಳಿ ಉಸಿರುಗಟ್ಟಿಸುವುದು, ಹೆಂಗಸರಾದರೆ ಅತ್ಯಾಚಾರ ನಡೆಸಿ ತಲೆಯ ಮೇಲೆ ಭಾರವಾದ ದಿಮ್ಮಿಗಳನ್ನು ಹೊರಿಸುವುದು, ಕಣ್ಣು ಕೀಳುವುದು, ಜೀವಂತವಿರುವಾಗಲೇ ದೇಹದ ಅಂಗಾಂಗಗಳನ್ನು ಕತ್ತರಿಸಿ ಅವರ ಸಂಬಂಧಿಕರಿಗೆ ಕಳಿಸುವುದು ಇತ್ಯಾದಿ. ಇವನ್ನು ‘ಪಾಶವೀ ವಿಧಾನ’ಗಳೆಂದರೆ ಅದು ಪಶುಗಳಿಗೇ ಅವಮಾನ ಮಾಡಿದಂತೆ ಎಂದಿದ್ದಾರೆ ಮೇಲೆ ಹೇಳಿದ ಫ್ರೆಂಚ್ ಪತ್ರಿಕಾಕರ್ತರು.

ಈ ಎಲ್ಲದರ ಬೆನ್ನ ಹಿಂದಿನ ಶಕ್ತಿ ಯಾವುದು? ಟಿ. ವಿ. ಕಾರ್ಯಕ್ರಮದಲ್ಲಿನ ಅಮೇರಿಕಾದ ನಕಾಶೆ ಹಾಗೂ ರೀಗನ್‌ರ ಫೋಟೋನೇ ಉತ್ತರ ಹೇಳುತ್ತದೆ. ಗ್ವಾಟೆಮಾಲಾದ ಜಮೀನುದಾರರು ಮತ್ತು ವ್ಯಾಪಾರಸ್ಥರು ಹಣ ಒದಗಿಸುವವರು. ಇತ್ತೀಚೆಗೆ ಅಮೇರಿಕಾದಲ್ಲಿನ ಅಧ್ಯಕ್ಷೀಯ ಚುನಾವಣೆಗಳಲ್ಲಿ ರೀಗನ್‌ಗೆ ಬೆಂಬಲವಾಗಿ ಇವರೆಲ್ಲಾ ಹಣಸಹಾಯ ಒದಗಿಸಿದ್ದಾರಂತೆ. ಪ್ರತಿಯಾಗಿ ಗ್ವಾಟೆಮಾಲಾಕ್ಕೆ ನಿಲ್ಲಿಸಿದ್ದ ಶಸ್ತ್ರಾಸ್ತ್ರ ಪೂರೈಕೆಯನ್ನು, ಸರಕಾರೀ ದಮನಯಂತ್ರಕ್ಕೆ ‘ಯೋಗ್ಯ ತರಬೇತಿ ಪುನರಾರಂಭಿಸಲು ರೀಗನ್ ಒಪ್ಪಿದ್ದರಂತೆ. ಈಗ ಅವನ್ನು ಒಂದೊಂದಾಗಿ ಜಾರಿಗೊಳಿಸುತ್ತಿದ್ದಾರಂತೆ.

‘ನ್ಯೂಯಾರ್ಕ್ ಟೈಮ್ಸ್’ ಪತ್ರಿಕೆಯಲ್ಲಿ ಗ್ವಾಟೆಮಾಲಾದ ಅತ್ಯಾಚಾರಗಳ ಬಗ್ಗೆ ಕೇಳಿದಾಗ “ಯೋಗ್ಯ ತರಬೇತಿಯಿಲ್ಲದೆ ಹಾಗಾಯಿತು” ಎಂದು ಅಮೇರಿಕಾದ ಸೈನಿಕ ಕೇಂದ್ರವಾದ ಪೆಂಟಗಾನ್‌ನ ವಕ್ತಾರರು ಹೇಳಿದರಂತೆ! ತಮ್ಮದು ‘ಸ್ವತಂತ್ರ ಜಗತ್ತು’ ಎನ್ನುವ ಬಂಡವಾಳಶಾಹೀ ದೇಶಗಳ ಸುಪರ್ ಗೋಸುಂಬೆತನಕ್ಕೆ ತಕ್ಕುದಾಗಿಯೇ ಇದೆ ಈ ಉತ್ತರ.

ಚಿಲೀ ಕಮ್ಯೂನಿಸ್ಟ್ ಪಕ್ಷದ ಕರೆ

ಅದೇ ಸಿ.ಐ.ಎ., ಪೆಂಟಗಾನ್ ಹಾಗೂ ಸಾಮ್ರಾಜ್ಯಶಾಹಿಗಳು ದೇಶದೊಳಗಿನ ಬಲಿಷ್ಠ ಆರ್ಥಿಕ ಹಿತಾಸಕ್ತಿಗಳೊಂದಿಗೆ ಸೇರಿ ನಡೆಸಿದ ಪಿತೂರಿಯ ಪರಿಣಾಮವಾಗಿ ಚಿಲಿಯಲ್ಲಿ ಅಧ್ಯಕ್ಷ ಅಲೆಂಡೆಯವರ ಜನಪರ ಸರಕಾರ ಪದಚ್ಯುತಿಯಾಗಿ ಪಿನೋಚೆಟ್ ಎಂಬ ಸೈನಿಕ ಸರ್ವಾಧಿಕಾರಿಯ ಯಮಹಿಡಿತದಲ್ಲಿ ಸಿಲುಕಿಕೊಂಡದ್ದನ್ನು ಜಗತ್ತಿನ ಯಾವ ಪ್ರಗತಿಶೀಲನೂ ಮರೆಯಲು ಸಾಧ್ಯವಿಲ್ಲ. 1973ರ ಸೆಪ್ಟೆಂಬರ್ 11ರಂದು ಜನರಿಂದ ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಅಲೆಂಡೆಯವರು ತನ್ನ ಜನರು ಪ್ರಜಾಪ್ರಭುತ್ವ, ಸಂವಿಧಾನ ಹಾಗೂ ಸ್ವದೇಶದ ಗೌರವಕ್ಕಾಗಿ ಹೋರಾಡುತ್ತಾ ಪ್ರಾಣಾರ್ಪಣೆ ಮಾಡಿದರು. ಅವರಿಂದಲೇ ದಂಡಾಧಿಕಾರಿಯಾಗಿ ನೇಮಕಗೊಂಡ ಕೊಲೆಗಾರ ಪಿನೋಚೆಟ್ ದುಷ್ಟ ಸಿ.ಐ.ಎ.ಯ ಸಂಪೂರ್ಣ ಬೆಂಬಲದಿಂದ ‘ಅಧ್ಯಕ್ಷ’ನೆಂದು ಸಾರಿಕೊಂಡ. ಈ ವರ್ಷದ ಮಾರ್ಚ್ 11ರಂದು ಒಂದು ತೀರಾ ನಾಚಿಕೆಗೇಡಿನ ನಾಟಕ ನಡೆಸಿ ಬಹುಸಂಖ್ಯಾತ ಚಿಲೀ ಜನತೆಯ ಇಚ್ಛೆಯ ವಿರುದ್ಧ ತನ್ನ ಮೋಸದ ಸಂವಿಧಾನವನ್ನು ಜಾರಿಗೊಳಿಸಿ ತನ್ನನ್ನು ಆಜೀವನ ಅಧ್ಯಕ್ಷನೆಂದು ಸ್ಥಾಪಿಸಿಕೊಂಡಿದ್ದಾನೆ. ಬೆಂಬಲಕ್ಕೆ ಕುಖ್ಯಾತ ಸಿ.ಐ.ಎ. ಮತ್ತು ಚಿಲೀಯ ಆರ್ಥಿಕ ಬಣಗಳು ಹಾಗೂ ಫ್ಯಾಸಿಸ್ಟ್ ಪರ ರಾಜಕಾರಣಿಗಳು ಇದ್ದೇ ಇದ್ದಾರೆ. ಚಿಲಿಯ ಹಣದ ಚೀಲಗಳ ಒಡೆಯರಿಗೆ ಬಹುಶಃ ಪಿನೋಚೆಟ್ ಎಂಬ ಈ ಖೂಳನಿಗಿಂತ ಉತ್ತಮ ಕೈಗೊಂಬೆ ಸಿಗಲಾರರು. ಯಾಕೆಂದರೆ ಪಿನೋಚೆಟ್ ಮೋಸದಿಂದ ಚಿಲಿಯ ಸರ್ವಾಧಿಕಾರಿಯಾದ ಮೇಲೆ ಚಿಲಿ ಜನತೆಯ ಶ್ರಮದ ಫಲವನ್ನು ಲೂಟಿ ಹೊಡೆಯಲು ಅವರಿಗೆ ಸುವರ್ಣಾವಕಾಶ ಒದಗಿಸಿಕೊಟ್ಟ.

ಪಿನೋಚೆಟ್ ತನ್ನ ದಬ್ಬಾಳಿಕೆಯನ್ನು ದಿನೇ ದಿನೇ ತೀವ್ರಗೊಳಿಸುತ್ತಿದ್ದಾನೆ. ಸಿ.ಎನ್.ಐ. ಎಂಬ ದೇಶವ್ಯಾಪೀ ಗುಪ್ತಚರ ಸಂಸ್ಥೆಯ ಕೇಡಿಗಳಿಗೆ ಕೊಲೆ, ಅಪಹರಣ, ಚಿತ್ರಹಿಂಸೆಯ ಪೂರ್ಣ ಅಧಿಕಾರ ಕೊಡಲಾಗಿದೆ. ಸಾಲದ್ದಕ್ಕೆ ಫ್ಯಾಸಿಸಂ ವಿರುದ್ಧ ಹೋರಾಡುವವರಿಗೆ ಮರಣದಂಡನೆ ವಿಧಿಸಲು ವಿಶೇಷ ಮಿಲಿಟರಿ ಸಮಿತಿಗಳು, ಸೇನೆಯ ಅಧಿಕಾರಿಗಳು ಹಾಗೂ ಸಾಮಾನ್ಯ ಸೈನಿಕರನ್ನು ತನ್ನ ಈ ಪಾಶವಿಕ ಯೋಜನೆಗಳಲ್ಲಿ ಒಳಗೊಳ್ಳುವಂತೆ ಸಾಧ್ಯವಿದ್ದ ಎಲ್ಲಾ ಪ್ರಯತ್ನ ನಡೆಸುತ್ತಿದ್ದಾನೆ. ಆತನ ಹೊಸ ಸಂವಿಧಾನ ಫ್ಯಾಸಿಸ್ಟ್ ಕ್ರೌರ್ಯಕ್ಕೆ ಶಾಸಕಾಂಗ ಹಾಗೂ ನ್ಯಾಯಾಂಗದ ಹೌದಪ್ಪಗಳಿಂದ ಮಾನ್ಯತೆ ದೊರಕಿಸುವಂತಹದ್ದಾಗಿದ್ದು ಜನತೆಯ ಅಪಹಾಸ್ಯ ಮಾಡುತ್ತಿದೆ.

ಆದರೆ ವಿವಿಧ ಜನವಿಭಾಗಗಳು ನಡೆಸುತ್ತಿರುವ ನ್ಯಾಯಬದ್ಧ ಹೋರಾಟಗಳನ್ನು ಈ ಫ್ಯಾಸಿಸ್ಟ್ ದಬ್ಬಾಳಿಕೆ ತಡೆಯಲಾರದು ಎಂದಿರುವ ಚಿಲಿ ಕಮ್ಯೂನಿಸ್ಟ್ ಪಕ್ಷ ಚಿಲಿಯ ಎಲ್ಲಾ ದೇಶಪ್ರೇಮಿ ಹಾಗೂ ಜನವಾದಿಗಳಿಗೆ ಫ್ಯಾಸಿಸ್ಟ್ ವಿರೋಧೀ ಹೋರಾಟಗಳನ್ನು ದೃಢ ನಿರ್ಧಾರದಿಂದ ಮುಂದುವರೆಸಬೇಕೆಂದು ಕರೆಕೊಟ್ಟಿದೆ. ಸುಮಾರು ಎಂಟು ವರ್ಷಗಳಿಂದ ಜನತೆಯ ಸ್ವಾತಂತ್ರ್ಯಗಳನ್ನು ಕಾಲ್ಕೆಳಗೆ ತುಳಿದು ಹಾಕಲಾಗಿದ್ದರೂ ಜನರ ಪ್ರಜಾಪ್ರಭುತ್ವವಾದೀ ನಡವಳಿಕೆಗಳು ಇನ್ನೂ ಜೀವಂತವಾಗಿವೆ. ದುಡಿಯುವ ಜನರು ಈ ಹಿಂದೆ ಅಪಾರ ತ್ಯಾಗ, ಹೋರಾಟಗಳಿಂದ ಗಳಿಸಿದ್ದನ್ನು, ಸರ್ವಾಧಿಕಾರೀ ಆಡಳಿತ ಒಂದೊಂದಾಗಿ ನಾಶಪಡಿಸಿದ್ದನ್ನು ಮತ್ತೆ ಗೆದ್ದುಕೊಳ್ಳಬೇಕೆಂಬ ದೃಢನಿರ್ಧಾರವೂ ಹಾಗೇ ಇದೆ.

ಪಿನೋಚೆಟ್‌ನ ಈ ಫ್ಯಾಸಿಸ್ಟ್ ಸಂವಿಧಾನವನ್ನು ಚಿಲೀ ಜನತೆ ಎಂದೂ ಮಾನ್ಯಮಾಡುವುದಿಲ್ಲ. ಈ ಪ್ರಜಾಪೀಡಕನನ್ನು ಕಿತ್ತೆಸೆದ ಕೂಡಲೇ ಅವನ ಸಂವಿಧಾನವನ್ನು ರದ್ದುಮಾಡಲಾಗುವುದು.

ಜನಸಾಮಾನ್ಯರ ಹೋರಾಟಗಳು, ಫ್ಯಾಸಿಸ್ಟ್ ಆಡಳಿತದ ವಿರುದ್ಧ ನೇರ ಆಕ್ರಮಣ ಹಾಗೂ ಸಂಪೂರ್ಣ ಜನತೆಯ ಜಂಟೀ ಹೋರಾಟಗಳು ಪಿನೋಚೆಟ್‌ನ ಮಹತ್ವಾಕಾಂಕ್ಷೆಗಳನ್ನು ಮಣ್ಣುಪಾಲು ಮಾಡುತ್ತವೆ ಎಂದು ತಾವು ಬಲವಾಗಿ ನಂಬಿದ್ದೇವೆಂದು ಚಿಲಿ ಕಮ್ಯೂನಿಸ್ಟ್ ಪಕ್ಷದ ಈ ಹೇಳಿಕೆ ಸಾರುತ್ತದೆ. ಅದು ಕಾರ್ಮಿಕರಿಗೆ, ಜನತೆಗೆ, ಸೈನ್ಯದೊಳಗಿನ ಎಲ್ಲಾ ಜನವಾದೀ ವಲಯಗಳಿಗೆ ಸರ್ವಾಧಿಕಾರದ ವಿರುದ್ಧ ಎದ್ದುನಿಂತು ದಬ್ಬಾಳಿಕೆಯನ್ನು ಕಿತ್ತೊಗೆಯುವುದು ಜನತೆಯ ಹಕ್ಕು ಎಂದು ಮನವರಿಕೆಮಾಡಿಕೊಳ್ಳಬೇಕೆಂದು ಕರೆ ನೀಡಿದೆ.

“ನಿಕಾರಾಗುವ ಹಾಗೂ ಎಲ್ ಸಾಲ್ವಡೋರ್‌ನ ಹೋರಾಟಗಳಿಂದ ಚಿಲಿ ಜನತೆಗೆ ಹೊಸ ಉತ್ಸಾಹ ಮೂಡಿದೆ. ಜಗತ್ತಿನ ದುಡಿಮೆಗಾರರು, ಫ್ಯಾಸಿಸ್ಟ್ ವಿರೋಧೀ ಶಕ್ತಿಗಳು, ಎಲ್ಲಕ್ಕಿಂತ ಮಿಗಿಲಾಗಿ ಶಕ್ತಿಶಾಲಿ ಸಮಾಜವಾದೀ ದೇಶಗಳ ಬೆಂಬಲವಿದೆ ..ನಮ್ಮ ಹಕ್ಕು ಹಾಗೂ ಶಕ್ತಿಯಲ್ಲಿ ಪೂರ್ಣ ನಂಬಿಕೆಯಿಟ್ಟು ನಾವು ಗೆದ್ದೇಗೆಲ್ಲುತ್ತೇವೆ” ಎಂದು ಕಮ್ಯೂನಿಸ್ಟ್ ಪಕ್ಷ ಈ ಹೇಳಿಕೆಯ ಕೊನೆಯಲ್ಲಿ ಸಾರಿದೆ.

ಫ್ಯಾಸಿಸಂನಿಂದ ವಿಮೋಚನೆಯ ವಾರ್ಷಿಕಾಚರಣೆ- ರುಮಾನಿಯಾ

ಈಗ ಗ್ವಾಟೆಮಾಲಾ ಹಾಗೂ ಚಿಲಿಯಂತೆ ಹಿಂದೆ ಫ್ಯಾಸಿಸ್ಟ್ ದಬ್ಬಾಳಿಕೆಗೆ ಒಳಗಾಗಿದ್ದ ರುಮಾನಿಯಾ 1944ರ ಆಗಸ್ಟ್ 23ರಂದು ಅದರಿಂದ ವಿಮೋಚನೆ ಪಡೆಯಿತು. ಈ ವಿಮೋಚನೆಯ 37ನೇ ವಾರ್ಷಿಕೋತ್ಸವವನ್ನು ಈ ಆಗಸ್ಟ್ 23ರಂದು ಆದೇಶ ಆಚರಿಸಿತು. ಈ ವಿಮೋಚನಾ ಸಮರದ ನೇತೃತ್ವವಹಿಸಿ ನಂತರ ಜನವಾದೀ ಕ್ರಾಂತಿಯಿಂದ ಸಮಾಜವಾದೀ ಕ್ರಾಂತಿ ಹಾಗೂ ಸಮಾಜವಾದಿ ಸಮಾಜದ ರಚನೆಯಲ್ಲಿ ಮುಂದಾಳುತ್ವ ಕೊಟ್ಟ ರುಮಾನಿಯಾದ ಕಮ್ಯೂನಿಸ್ಟ್ ಪಕ್ಷವೂ ಈ ತನ್ನ 60ನೇ ವರ್ಷವನ್ನು ಪೂರ್ಣಗೊಳಿಸಿದೆ.

ಈ ಸಫಲ ಕ್ರಾಂತಿಗೆ ಅಡಿಗಲ್ಲು ಹಾಕಿದ್ದು ರುಮಾನಿಯಾ ಕಮ್ಯೂನಿಸ್ಟ್ ಪಕ್ಷ ಹಾಗೂ ಸಾಮಾಜಿಕ ಜನತಾಂತ್ರಿಕ ಪಕ್ಷಗಳು ಸೇರಿದ್ದ ಸಂಯುಕ್ತ ಕಾರ್ಮಿಕರ ರಂಗದ ಸ್ಥಾಪನೆ. ಇದಾದ ನಂತರ ಇನ್ನೂ ವಿಶಾಲವಾದ ರಾಷ್ಟ್ರೀಯ ಜನವಾದೀ ರಂಗ ಜೂನ್ 1944ರಲ್ಲಿ ಅಸ್ತಿತ್ವಕ್ಕೆ ಬಂತು. ಸೈನಿಕ ಅಧಿಕಾರಿಗಳೊಡನೆ ಈ ರಂಗದ ಸಂಪರ್ಕ ಹೆಚ್ಚೆಚ್ಚು ಬೆಳೆಯಲಾರಂಭಿಸಿತು. ಅದೇ ಸಮಯದಲ್ಲಿ ಸೋವಿಯೆಟ್ ಕೆಂಪು ಸೇನೆಗಳು ಹಿಟ್ಲರನ ನಾಝೀ ಸೇನೆಗಳ ವಿರುದ್ಧ ಪಡೆದ ಯಶಸ್ಸು ಹಾಗೂ ವಿವಿಧ ದೇಶಗಳಲ್ಲಿ ನಡೆಯುತ್ತಿದ್ದ ವಿಮೋಚನಾ ಹೋರಾಟಗಳೂ ರುಮಾನಿಯಾದ ವಿಮೋಚನಾ ಹೋರಾಟಗಳಿಗೆ ಸಹಾಯಕವಾಯಿತು. ಇದರಿಂದಾಗಿಯೇ 1944ರ ಆಗಸ್ಟ್ 23ರ ಸಶಸ್ತ್ರ ಬಂಡಾಯವನ್ನು ಯಶಸ್ವಿಯಾಗಿ ಮುಂದುವರಿಸಲು ಸಾಧ್ಯವಾಯಿತು. ಸೋವಿಯೆಟ್ ಸಂಘ ಹಾಗೂ ಇತರ ಮಿತ್ರ ಸೇನೆಗಳೊಂದಿಗೆ ರುಮಾನಿಯಾದ ಸಂಪೂರ್ಣ ಜನತೆ ಭಾಗವಹಿಸಿದಂತಹ ಈ ಹೋರಾಟಗಳು ಹಿಟ್ಲರ್ ಹಾಗೂ ಹೋರ್ಥೆಯ ಸೇನೆಗಳನ್ನು ರುಮಾ

(7ನೇ ಪುಟ ನೋಡಿ)

ಹರಿಜನರ ಮತಾಂತರ

ತಮಿಳುನಾಡಿನ ಹರಿಜನರ ಮತಾಂತರ ಈಗ ಸಾರ್ವಜನಿಕ ಚರ್ಚೆಗೆ ವಿಷಯವಾಗಿದೆ. ಜಾತಿಪದ್ಧತಿಯ ಮತ್ತು ಹರಿಜನರ ಮೇಲಿನ ದಬ್ಬಾಳಿಕೆಯ ಉಗ್ರ ಸಮರ್ಥಕರಾದ ಹಿಂದೂ ಮಡಿವಂತರು ಈಗ ಚುರುಕಾಗಿ ಕೆಲಸಮಾಡುತ್ತಿದ್ದಾರೆ. ಈಗ ಅವರು ಸಾಮಾಜಿಕ ಸುಧಾರಣೆ ಸಂಸ್ಥೆಗಳ ಮೇಲೆ ತಪ್ಪುಹೊರಿಸಿ, ನಮ್ಮ ರಾಮಕೃಷ್ಣ ಮತ್ತು ಇತರ ಮಠಗಳಿಗೆ ಏನಾಗಿದೆ ? ಎಂದು ದೂರ್ತತನದಲ್ಲಿ ಕೇಳುತ್ತಿದ್ದಾರೆ.

ತಮಿಳುನಾಡು ಸರ್ಕಾರ, ಹರಿಜನ ಕಲ್ಯಾಣ ನಿರ್ದೇಶಕ ಮತ್ತು ಸ್ಥಳೀಯ ಡಿ. ಐ. ಜಿ. ಇವರುಗಳು ನಡೆಸಿದ ಪ್ರಾಥಮಿಕ ತನಿಖೆಯು ಈ ವಿಚಾರದಲ್ಲಿ ಹಣದ ಪ್ರಸ್ತಾಪ ಇಲ್ಲವೆಂದು ಹೇಳಿದ್ದರೂ, ನ್ಯಾಯಾಂಗ ತನಿಖೆಗಾಗಿ ಒತ್ತಾಯ ತರಲಾಗುತ್ತಿದೆ. ಕಾಂಗ್ರೆಸ್ (ಐ) ಪ್ರಧಾನಕಾರ್ಯದರ್ಶಿ ಮೂಪನಾರ್ ಕಂಚಿ ಶಂಕರಾಚಾರ್ಯರಲ್ಲಿಗೆ ಓಡಿಹೋದದ್ದಲ್ಲದೆ, ಹರಿಜನರಲ್ಲಿ ಭರವಸೆ ತುಂಬಲು ಎಲ್ಲ ರಾಜಕೀಯ ಪಕ್ಷಗಳೂ ಪ್ರಯತ್ನಿಸಬೇಕೆಂದು ಅವರು ಹೇಳಿದ್ದಾರೆ. ಮತಾಂತರವನ್ನು ನಿಷೇಧಿಸಬೇಕೆಂದು ಆರೆಸ್ಸೆಸ್ ಕೇಳುತ್ತಿದೆ. ಮಕ್ವಾನ, ವಾಜಪೇಯಿ ಎಲ್ಲ ಮೀನಾಕ್ಷಿಪುರಕ್ಕೆ ಭೇಟಿ ಕೊಟ್ಟಿದ್ದಾರೆ. ಭಾರತದ ಹಿಂದೂ ಸಮಾಜದಷ್ಟೇ ಮುಸ್ಲಿಮ್ ಸಮಾಜವೂ ಜಾತಿಪೀಡಿತವಾದದ್ದು ಎಂದು ಸೈಯದ್ ಶಿಹಾಬುದ್ದೀನ್ ಬರೆದಿದ್ದಾರೆ.

ಅಸ್ಪೃಶ್ಯರು ಮತಾಂತರ ಹೊಂದಬಾರದು, ಎಲ್ಲ ಅವಮಾನಗಳನ್ನು ತಡೆದುಕೊಳ್ಳಬೇಕು ಎಂಬರ್ಥ ಬರುವ ಹಾಗೆ ಆರ್ಗನೈಸರ್ ಬರೆದಿದೆ.

ಸಂವಿಧಾನ ಮತ್ತು ಕಾನೂನಿನ ದೃಷ್ಟಿಯಿಂದ ಮತಾಂತರಕ್ಕೆ ಯಾವ ಆಕ್ಷೇಪಣೆಯೂ ಇಲ್ಲ. ವಿವಿಧ ಶ್ರದ್ಧೆಗಳನ್ನು ಬೋಧಿಸುವ, ಮತಾಂತರ ಹೊಂದುವ ಹಕ್ಕುಗಳೂ ಸೇರಿದಂತೆ, ಆರಾಧನೆ ಮತ್ತು ಶ್ರದ್ಧೆಯ, ಮನಸಾಕ್ಷಿಯ ಸ್ವಾತಂತ್ರ್ಯದ ಪ್ರಜಾಸತ್ತಾತ್ಮಕ ಹಕ್ಕನ್ನು ಭಾರತದ ಸಂವಿಧಾನ ಮನ್ನಿಸುತ್ತದೆ.

ಮತಾಂತರವು ಕಾನೂನಿನ ಪ್ರಕಾರ ಶಿಕ್ಷಾರ್ಹವಾದುದಲ್ಲ. ಅಲ್ಲದೆ, ಅದನ್ನು ಪ್ರಜಾಸತ್ತಾತ್ಮಕ ಹಕ್ಕಿನ ಒಂದು ಭಾಗವಾಗಿ ಅಂಗೀಕರಿಸಲಾಗಿದೆ. ಅದರ ಉಲ್ಲಂಘನೆಯು ಪ್ರಜಾಸತ್ತೆಯ ನಿಯಮಗಳ ಮೇಲೆ ಮತ್ತು ಪ್ರಜಾಸತ್ತಾತ್ಮಕ ಚಳುವಳಿಯ ಮೇಲೆ ಹಲ್ಲೆ ಎಂದಾಗುತ್ತದೆ.

ಭಾರತವು ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಇತರ 'ಇಸ್ಲಾಮಿಕ್' ದೇಶಗಳ ಹಾಗೆ ಒಂದೇ ಮತದಲ್ಲಿ ನಂಬಿಕೆಯಿಟ್ಟ ದೇಶವಲ್ಲ. ಆರಾಧನೆಯ ಸ್ವಾತಂತ್ರ್ಯ, ವಿವಿಧ ಶ್ರದ್ಧೆಗಳ ಪ್ರಚಾರದ ಸ್ವಾತಂತ್ರ್ಯ, ಇವುಗಳನ್ನು ಇಲ್ಲಿಯೂ ಕೊಡಲಾಗಿದೆ. ಆದರೆ ಇಲ್ಲಿ ಮುಸ್ಲಿಮರನ್ನು ಹಿಂದೂಗಳಾಗಿ ಪರಿವರ್ತಿಸುವ ಸ್ವಾತಂತ್ರ್ಯ ಇಲ್ಲ. ಆದರೆ ಹಿಂದೂ ಅಲ್ಪಸಂಖ್ಯಾತರು ತಮ್ಮ ಶ್ರದ್ಧೆ ಧರ್ಮಗಳನ್ನು ಪಾಲಿಸಲು ಅವಕಾಶವಿದೆ.

ಕೇಳಬೇಕಾದ ಪ್ರಶ್ನೆ

ಭಾರತದಲ್ಲಿ ಮತಾಂತರವನ್ನು ನಿಷೇಧಿಸುವುದೆಂದರೆ ಅದನ್ನೂ ದೇಶ ಎಂದು ಘೋಷಿಸಿ, ಜಾತ್ಯಾತೀತತೆಯನ್ನು ಕೈಬಿಟ್ಟಂತಾಗುತ್ತದೆ. ಹರಿಜನರ ಸುಳ್ಳು ರಕ್ಷಕರಾದ ಕಾಂಗ್ರೆಸ್ (ಐ) ನಾಯಕರಿಗೆ ಈಗ ಕೇಳಬೇಕಾಗಿರುವ ಪ್ರಶ್ನೆ ಎಂದರೆ-ದುರ್ಬಲ ವರ್ಗಗಳು ಪರಿಶಿಷ್ಟ ಜಾತಿಗಳು ಮತ್ತು ವರ್ಗಗಳಿಗಾಗಿ ಎಷ್ಟೋ ಮಾಡಿದ್ದೇವೆಂದು ಹೇಳಿಕೊಳ್ಳುವ ನಿಮ್ಮ ಘನ ಆಡಳಿತದಲ್ಲೇ, ಹರಿಜನರು ಇಸ್ಲಾಂ ಸ್ವೀಕರಿಸಲು ಇದ್ದಕ್ಕಿದ್ದಂತೆ ನಿರ್ಧರಿಸಿದರೇಕೆ ? ಅದು ತೀರ ಕೃತಘ್ನತೆಯ ಕಾರಣದಿಂದಲೇ ಅಥವಾ ನೀವು ಅವರಿಗೆ ಬೋಧಿಸಿದ ಮನಸಾಕ್ಷಿಯ ಸ್ವಾತಂತ್ರ್ಯ, ಆರಾಧನೆಯ ಸ್ವಾತಂತ್ರ್ಯ ಇವುಗಳಿಂದಲೇ.

ಅಸ್ಪೃಶ್ಯ ಜನತೆಯನ್ನು ಕಾಂಗ್ರೆಸ್ (ಐ) ನಾಯಕರು ಪ್ರತಿನಿಧಿಸುವುದಿಲ್ಲ ಮತ್ತು ಅವರಿಗೆ ಸೇವೆ ಮಾಡಿದ್ದೇವೆಂದು ಇವರು ಹೇಳಿಕೊಳ್ಳುವುದೆಲ್ಲವೂ ಸುಳ್ಳು ಎಂಬುದನ್ನು ಈ ಮತಾಂತರಗಳು ತೋರಿಸುತ್ತವೆ. ಇದಲ್ಲದೆ ಹಿಂದೂ ಧರ್ಮ ಸುಧಾರಣೆ ಕೂಡ ತನ್ನ ಕೊನೆಯನ್ನು ಮುಟ್ಟಿದೆ ಎಂಬುದನ್ನು ತೋರಿಸುತ್ತದೆ. ದೇವಾಲಯ ಪ್ರವೇಶಗಳು, ಅಂತರಜಾತಿ ಭೋಜನ, ಕೆಲಸದ ಮೀಸಲಾತಿ ಇವೆಲ್ಲವೂ ಆ ಕರಾಳ ಮಾನವ ಸಂಬಂಧಕ್ಕೆ ಸುಳ್ಳು ಪರಿಹಾರಗಳಾಗಿವೆ ಎಂಬುದನ್ನು ತೋರಿಸುತ್ತವೆ. ಪ್ರತಿಭಟನೆಯನ್ನು ಆಸಕ್ತ ಅಂಶಗಳು ಮತಾಂತರದ ಕಡೆ ತಿರುಗಿಸಿವೆ.

ನಿಜವಾದ ವಿಮೋಚನೆ

ಮತದ ಬದಲಾವಣೆ ಸಾಮಾಜಿಕ ಪರಿಸ್ಥಿತಿಗಳಲ್ಲಿ ಬೇರುಬಿಟ್ಟಿರುವ ಅಸ್ಪೃಶ್ಯತೆ ಸಮಸ್ಯೆಯನ್ನು ನೀಗುವುದಿಲ್ಲ ಎನ್ನುವುದು ನಿಜ. ಅಸ್ಪೃಶ್ಯರ ನಿಜವಾದ ವಿಮೋಚನೆಗೆ ಬೇಕಾದ ಬದಲಾವಣೆ ಎಂದರೆ, ಭಾರತೀಯ ಬಡಜನರ ಸಮೂಹಕ್ಕೆ ಬೇಕಾದ ಹಾಗೆ - ಕೃಷಿಕ್ರಾಂತಿ, ಉಳುವವನಿಗೆ ಭೂಮಿ ಮತ್ತು ಈಗಿರುವ ಸಾಮಾಜಿಕ ಆರ್ಥಿಕ ವ್ಯವಸ್ಥೆಯ ಸಂಪೂರ್ಣ ಬದಲಾವಣೆ ಮತ್ತು ತುಳಿತಕ್ಕೊಳಗಾದ ಜನಸಮೂಹದ ಕೈಗೆ ರಾಜಕೀಯ ಅಧಿಕಾರ.

ಡಾ. ಅಂಬೇಡ್ಕರ್ ಅವರು ತಮ್ಮ ಅನುಯಾಯಿಗಳೊಡನೆ ಬೌದ್ಧಧರ್ಮವನ್ನು ಸ್ವೀಕರಿಸಿದರು. ಆದರೆ ತಾವು ಹಿಂದೂಗಳಲ್ಲವೆಂದು ಹೇಳಿಕೊಂಡವರ ಸ್ಥಾನಮಾನದಲ್ಲಿ ಏನೇನೂ ಬದಲಾವಣೆ ಆಗಲಿಲ್ಲ. ಇದರ ಬದಲಿಗೆ, ಮಹಾರಾಷ್ಟ್ರದ ನವ ಬೌದ್ಧರು, ಕೆಲಸದಲ್ಲಿ ಮೀಸಲಾತಿ, ಶಿಕ್ಷಣ ಸೌಲಭ್ಯ ಮತ್ತು ಶಾಸಕಾಂಗದಲ್ಲಿ ಮೀಸಲು ಸ್ಥಾನಗಳು ಇವುಗಳಿಗಾಗಿ ತಮ್ಮನ್ನು ಪರಿಶಿಷ್ಟ ಜಾತಿಯವರು ಎಂದೇ ಪರಿಗಣಿಸಬೇಕೆಂದು ಸರ್ಕಾರಕ್ಕೆ ಅರ್ಜಿಹಾಕಿಕೊಳ್ಳುವಂತಾಯಿತು.

ಹಿಂದೂ ದೃಷ್ಟಿಕೋನ

ಹಿಂದೂಗಳು ಹರಿಜನರನ್ನು ಕೀಳಾಗಿ ಕಾಣುವಷ್ಟು ಕ್ರೈಸ್ತರನ್ನು ಮುಸಲ್ಮಾನರನ್ನು ಕಾಣಲು ಸಾಧ್ಯವಾಗುವುದಿಲ್ಲ. ಈ ಮತಾಂತರಗಳು ಆಧ್ಯಾತ್ಮಿಕ ಮುಕ್ತಿಗಾಗಿ ಮಾಡಿಕೊಂಡದ್ದಲ್ಲ. ಇವು ಅಸ್ಪೃಶ್ಯತೆಯ ವಿರುದ್ಧ ತೋರಿದ ಪ್ರತಿಭಟನೆ.

ಆದರೆ ಈ ಮತಾಂತರಗಳು ಆಧ್ಯಾತ್ಮಿಕ ನೆಪದ ಕೆಳಗೆ, ಕ್ರಾಂತಿಕಾರಿ ಸಾಮಾಜಿಕ ಪರಿವರ್ತನೆಯ ಕಡೆಗೆ ಇಟ್ಟ ಹೆಜ್ಜೆಯೂ ಅಲ್ಲ.

ಮತಾಂತರಗಳ ಹಿಂದೆ ಸೌದಿ ಅರೇಬಿಯದ ಹಣ, ಅಮೇರಿಕ ಸಾಮ್ರಾಜ್ಯಶಾಹಿಗಳ ಪ್ರತಿಗಾಮಿ ಶಕ್ತಿಗಳು ಇವೆ. ಈ ಮತಾಂತರಗಳ ಉದ್ದೇಶ ಹಿಂದೂ ಹಿಡಿತದಿಂದ ಅಸ್ಪೃಶ್ಯರನ್ನು ವಿಮೋಚನೆಗೊಳಿಸುವುದಲ್ಲ. ದೇಶದ ಪ್ರಜಾಸತ್ತಾತ್ಮಕ ಮತ್ತು ಸಮಾಜವಾದಿ ಚಳುವಳಿಗೆ ಧಕ್ಕೆ ತರುವುದು ಇದರ ಉದ್ದೇಶ. ಮತಾಂತರಿಗಳಲ್ಲಿ ಪ್ರತ್ಯೇಕತೆ ಮತ್ತು ದೂರನಿಲ್ಲುವ ಪ್ರಜ್ಞೆ ಬೆಳೆಸುವುದು ಇದರ ಉದ್ದೇಶ.

ದುಡಿಯುವ ವರ್ಗದ ಚಳುವಳಿಯು ಅಸ್ಪೃಶ್ಯರನ್ನು ಪ್ರವೇಶಿಸಿ ಅವರನ್ನು ಗೆದ್ದುಕೊಳ್ಳುವುದರಲ್ಲಿ ವಿಫಲವಾಗಿದೆ. ಈ ವೈಫಲ್ಯವನ್ನು

ಬಿ. ಟಿ. ರಣದಿವೆ

ಅಂತರರಾಷ್ಟ್ರೀಯ ಪ್ರತಿಗಾಮಿ ಶಕ್ತಿಗಳು ದುರುಪಯೋಗಪಡಿಸಿಕೊಳ್ಳುತ್ತಿವೆ.

ಈಶಾನ್ಯ ದಿಕ್ಕಿನಲ್ಲಿ

ಅನೇಕ ವಿದೇಶಿ ಕ್ರೈಸ್ತ ಮಠಗಳು ಚರ್ಚಿನ ಹೆಸರಿನಲ್ಲಿ ರಾಷ್ಟ್ರವಿರೋಧಿ ಚಟುವಟಿಕೆಗಳಲ್ಲಿ ತೊಡಗಿವೆ. ಈಶಾನ್ಯ ಪ್ರದೇಶದಲ್ಲಿ ಈ ಏಜೆನ್ಸಿಗಳು ವಹಿಸಿರುವ ಪ್ರತ್ಯೇಕತಾವಾದಿ ಪಾತ್ರ ಈಗ ಎಲ್ಲರಿಗೂ ತಿಳಿದಿದೆ. ಬುಡಕಟ್ಟು ಜನರ ಮೇಲಿನ ದಬ್ಬಾಳಿಕೆ ವರ್ತನೆಯನ್ನು ಅವು ಮತಾಂತರಕ್ಕೆ ಉಪಯೋಗಿಸಿಕೊಂಡು ಈ ಪ್ರದೇಶಗಳಲ್ಲಿ ಪ್ರತ್ಯೇಕತೆಯ ಭಾವನೆಯನ್ನು ಸೃಷ್ಟಿಸಿವೆ.

ಈಗ ತ್ರಿಪುರದಲ್ಲೂ ಅವರು ಅಂಥ ಪ್ರಚಾರ ಆರಂಭಿಸಿದ್ದಾರೆ. ಅಲ್ಲಿನ ಬಾಪ್ಟಿಸ್ಟ್ ಮಿಷನ್, ಇಡೀ ಬುಡಕಟ್ಟು ಜನತೆಯನ್ನು ಕ್ರೈಸ್ತಮತಕ್ಕೆ ಪರಿವರ್ತಿಸಲು ಪ್ರಯತ್ನಿಸುತ್ತಿದೆ. ಇದರ ಜೊತೆಗೆ ಭಾರತಕ್ಕೂ ಬುಡಕಟ್ಟು ಜನರಿಗೂ ಸಂಬಂಧ ಇಲ್ಲ ಎಂಬ ಪ್ರಚಾರವೂ ಆಗುತ್ತಿದೆ.

ಬೂರ್ಜ್ವಾ-ಭೂಮಾಲೀಕ ಕಾಂಗ್ರೆಸ್ ಆಡಳಿತವು ವರ್ಷಗಳಿಂದಲೂ ಅವರ ಮೇಲೆ ಹೇರಿದ ಜೀವನ ಪರಿಸ್ಥಿತಿಯಿಂದ ಪ್ರತ್ಯೇಕತಾವಾದಕ್ಕೆ ಅವರು ಕಿವಿಗೊಡುವಂತಾಗುತ್ತಿದೆ. ಮಹಾರಾಷ್ಟ್ರದಲ್ಲಿ ಮಾರ್ಕ್ಸ್‌ವಾದಿ ನೆಲೆಯಾಗಿರುವ ವಾರ್ಲಿ ಪ್ರದೇಶಗಳಲ್ಲೂ ಈಗ ಪ್ರತ್ಯೇಕತಾ ಪ್ರಚಾರ ಆರಂಭವಾಗಿದೆ.

ಕೋಮುವಾದಿ ಪ್ರಚಾರ

ಮುಸ್ಲಿಂ ಕೋಮುವಾದಿ ಪ್ರಚಾರದ ಜೊತೆಯೂ ಪ್ರತ್ಯೇಕತಾವಾದವಿದೆ. ಬೂರ್ಜ್ವಾ-ಭೂಮಾಲೀಕ ಆಡಳಿತವು ಅವರನ್ನು ಸಮಾನವಾಗಿ ಪರಿಗಣಿಸದೆ ಎರಡನೇ ದರ್ಜೆ ಪ್ರಜೆಗಳಾಗಿ ನೋಡಿಕೊಳ್ಳುವುದರಿಂದ ಮುಸ್ಲಿಂ ಶ್ರಮಜೀವಿಗಳು ಇದರ ಪ್ರಭಾವಕ್ಕೆ ಒಳಗಾಗುತ್ತಾರೆ. ಜಮಾತೆ ಇಸ್ಲಾಮಿ, ಲಂಡನ್ ಸೆಂಟರ್‌ಗಳು ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಧರ್ಮದ ಹೆಸರಿನಲ್ಲಿ ಪ್ರತ್ಯೇಕತೆ ಹರಡುತ್ತಾರೆ. ಕಾಶ್ಮೀರದಲ್ಲೂ ಪ್ರತ್ಯೇಕತಾವಾದ ಎದ್ದಿದೆ.

ಸಂವಿಧಾನಾತ್ಮಕವಾದ, ನ್ಯಾಯವಾದ ಮತ್ತು ಹಕ್ಕುಬದ್ಧವಾದ ಮತಾಂತರಗಳು ಈ ತಂತ್ರವನ್ನೇ ಬೆಂಬಲಿಸುತ್ತವೆ. ಅಸ್ಪೃಶ್ಯತೆಯ ನರಕದಿಂದ ತಪ್ಪಿಸಿಕೊಳ್ಳಲು ಇಸ್ಲಾಂ ಸ್ವೀಕರಿಸಿದ ಅಸ್ಪೃಶ್ಯರ ಬಗ್ಗೆ ಎಲ್ಲರೂ ಅಪಾರ ಸಹಾನುಭೂತಿ ತೋರಿಸಬೇಕು. ಏಕೆಂದರೆ ಮೊದಲೇ ಶೋಷಿತರಾಗಿದ್ದ ಈ ಜನತೆ ಈಗ ಮತ್ತೆ ವಿಮೋಚನೆಯಿಂದ ದೂರವಾಗಿ, ಬಿಡುಗಡೆಯ ಹೋರಾಟದಿಂದ ದೂರ ಸರಿಯುವ ಸಾಧ್ಯತೆ ಇದೆ.

ಧರ್ಮದಲ್ಲಿ ನಂಬಿಕೆ ಇಡಲು ಅಥವಾ ಇಡದಿರಲು ಪ್ರತಿಯೊಬ್ಬನ ಹಕ್ಕನ್ನು ರಕ್ಷಿಸುವಂತೆಯೇ ಧರ್ಮವು ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಆಡಳಿತ ಜೀವನದಲ್ಲಿ ತಲೆಹಾಕದಿರುವಂತೆ ಹೋರಾಡುವ ಅಗತ್ಯವನ್ನು ನಮ್ಮ ಪಕ್ಷದ ಕಾರ್ಯ ಸರಿಯಾಗಿ ಗುರುತಿಸಿದೆ.

ಇಂದು ಆರೆಸ್ಸೆಸ್, ಹಿಂದೂ ಸ್ವರೂಪದ ಬಗ್ಗೆ ಮಾತನಾಡಿ ಮುಸ್ಲಿಮರ ಪ್ರತ್ಯೇಕತಾ ಭಾವನೆಯನ್ನು ಹೆಚ್ಚಿಸುತ್ತಿದೆ. ಈ ಎರಡರ ವಿರುದ್ಧವೂ ನಾವು ಹೋರಾಡಬೇಕಾಗಿದೆ. ಬುಡಕಟ್ಟು ಹರಿಜನರ ಶೋಷಣೆ, ಧಾರ್ಮಿಕ ನಂಬಿಕೆಗಳು, ಮತಾಂತರಗಳು, ಕೋಮು ಗಲಭೆಗಳು ಎಲ್ಲವನ್ನೂ, ದೇಶದ ಐಕ್ಯತೆ ಮತ್ತು ಶ್ರಮಜೀವಿಗಳ ಹೋರಾಟವನ್ನು ಮುರಿಯಲು ಉಪಯೋಗಿಸಿಕೊಳ್ಳಲಾಗುತ್ತಿದೆ. ದೇಶದಲ್ಲಿ ಸ್ವಾತಂತ್ರ್ಯ, ಪ್ರಜಾಪ್ರಭುತ್ವಗಳನ್ನು ಕಾಪಾಡಬೇಕಾದರೆ, ಸಮಾಜವಾದ ತರಬೇಕಾದರೆ ಇವುಗಳನ್ನು ವಿರೋಧಿಸಬೇಕು. ಎಲ್ಲ ಮತ ಜಾತಿಗಳ ಶ್ರಮಜೀವಿಗಳ ಒಟ್ಟು ಹೋರಾಟದಿಂದ ಮಾತ್ರ ಇದು ಸಾಧ್ಯ.

●

ಪ್ರೊಫೆಸರ್ ಇರ್‌ಫಾನ್‌ರ ಸಸ್ಪೆನ್‌ಷನ್‌ಗೆ ಪ್ರತಿಭಟನೆ

ಅಲೀಗಡ ಮುಸ್ಲಿಂ ವಿಶ್ವವಿದ್ಯಾಲಯ (ಎ.ಎಂ.ಯು.)ದ ಪ್ರಾಚಾರ್ಯ, ಸುಪ್ರಸಿದ್ಧ ಇತಿಹಾಸಕಾರ ಪ್ರೊಫೆಸರ್ ಇರ್‌ಫಾನ್ ಹಬೀಬರನ್ನು ಎ. ಎಂ. ಯು.ನ ಉಪಕುಲಪತಿಗಳು ಸಸ್ಪೆಂಡ್ ಮಾಡಿದ್ದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಉಗ್ರವಾಗಿ ಖಂಡಿಸಿದೆ.

ಆಗಸ್ಟ್ 3ರಂದು ದೆಹಲಿಯಿಂದ ಪಿ. ಬಿ. ಈ ಕೆಳಕಂಡ ಹೇಳಿಕೆ ಹೊರಡಿಸಿದೆ. "ಪ್ರೊ. ಹಬೀಬರ ಸಸ್ಪೆನ್‌ಷನ್‌ನಲ್ಲಿ ಎ.ಎಂ.ಯು. ನ ಜಾತೀವಾದಿಗಳ ಕೈವಾಡವಿದೆ. ಸಾಂಪ್ರದಾಯಿಕ ಶಕ್ತಿಗಳ ಒತ್ತಾಯಕ್ಕೆ ಮಣಿದು ಉಪಕುಲಪತಿಗಳು ಈ ಕ್ರಮಕೈಗೊಂಡಿರುವುದು ಖಂಡನೀಯ". ●

ಪ್ರತಿಭಟನೆ

ಶಿವಪುತ್ರಪ್ಪ ಎಂಬ ದಲಿತ ಯುವಕ ರಾಯಚೂರು ಜಿಲ್ಲೆಯ ಗಂಗಾವತಿಯಲ್ಲಿ ಸ್ಪೆಷಲ್ ತಹಸೀಲ್ದಾರ ಆಫೀಸಿನಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದರು. ಈ ಯುವಕನನ್ನು ಯಾವುದೇ ಕಾರಣವಿಲ್ಲದೇ ಕೆಲಸದಿಂದ ವಜಾ ಮಾಡಿದ್ದಾರೆ.

ತಹಸೀಲ್ದಾರರ ಈ ಕ್ರಮವನ್ನು ಪ್ರಾಂತರೈತಸಂಘದ ರಾಯಚೂರು ಜಿಲ್ಲಾ ಸಂಚಾಲಕ ಕಾಂ. ಚಂದ್ರಶೇಖರ ಬಾಳೆ ಉಗ್ರವಾಗಿ ಖಂಡಿಸಿದ್ದಾರೆ. ಶ್ರೀ ಶಿವಪುತ್ರಪ್ಪನವರನ್ನು ಕೂಡಲೇ ಕೆಲಸಕ್ಕೆ ವಾಪಸ್‌ತೆಗೆದುಕೊಳ್ಳದಿದ್ದಲ್ಲಿ ಹೋರಾಟಮಾಡಬೇಕಾದೀತೆಂದು ಎಚ್ಚರಿಸಿದ್ದಾರೆ. ●

ಕಾರ್ಮಿಕವರ್ಗದ ಅಂತರರಾಷ್ಟ್ರವಾದ ಏಕೆ?

ಮಾರ್ಕ್ಸ್‌ವಾದದ ಅತ್ಯಂತ ಮಹತ್ವದ ಕ್ರಾಂತಿಕಾರಿ ತತ್ವಗಳಲ್ಲಿ ಕಾರ್ಮಿಕವರ್ಗದ ಅಂತರರಾಷ್ಟ್ರವಾದ (Proletarian Internationalism) ಒಂದು. ಹಳ್ಳಿಕೊಂಪೆಯಲ್ಲೇ ಆಗಲಿ ಅಥವಾ ಶಹರಿನಲ್ಲಿಯ ಅತ್ಯಾಧುನಿಕ ಉದ್ಯೋಗ ಕೇಂದ್ರದಲ್ಲೇ ಆಗಲಿ ಕೆಂಪು ಬಾವುಟದ ಕೆಳಗೆ ಸಂಘಟಿತರಾದ ಕಾರ್ಮಿಕರೆಲ್ಲರೂ ತಮ್ಮ ಸಣ್ಣ-ದೊಡ್ಡ ಹೋರಾಟಗಳೆಲ್ಲದರಲ್ಲಿಯೂ ಒಕ್ಕೊರಳಿನಿಂದ ಕೂಗುವ ಘೋಷಣೆಯೆಂದರೆ 'ಜಗತ್ತಿನ ಕಾರ್ಮಿಕರೇ ಒಂದಾಗಿ!' ಭಾರತದಲ್ಲಷ್ಟೇ ಅಲ್ಲ ಜಗತ್ತಿನ ಎಲ್ಲ ದೇಶಗಳಲ್ಲೂ ಕಾರ್ಮಿಕರ ಹೋರಾಟದುಸಿರಾಗಿ ಮೂಡುವ ಘೋಷಣೆ ಇದು. ಮಾರ್ಕ್ಸ್, ಲೆನಿನ್ನರನ್ನೊಳಗೊಂಡು ಇಂದಿನ ವರೆಗಿನ ಎಲ್ಲ ಕಮ್ಯುನಿಸ್ಟ್ ಕ್ರಾಂತಿಕಾರಿಗಳ ಗ್ರಂಥಗಳಲ್ಲಿಯೂ ಮೊದಲನೆ ಪುಟದಲ್ಲಿ ನಮ್ಮನ್ನುದ್ದೇಶಿಸಿ ಬೋಧಿಸುವುದು ಈ ಘೋಷಣೆಯೇ. ಈ ತತ್ವದ ಕ್ರಾಂತಿಕಾರಕ ಅರ್ಥವನ್ನು ತಿಳಿದುಕೊಳ್ಳುವುದು ಹಾಗೂ ಕಾರ್ಮಿಕ ಜನತೆಯಲ್ಲಿ ಸಹಾ ಬಿಂಬಿಸುವುದು ಕಮ್ಯುನಿಸ್ಟರ ಆದ್ಯ ಕರ್ತವ್ಯ.

ಕಾರ್ಮಿಕವರ್ಗದ ಚಿಕ್ಕದೊಡ್ಡ ಹೋರಾಟಗಳನ್ನು (ಈ ಹೋರಾಟಗಳು ಆರ್ಥಿಕ ಇಲ್ಲವೇ ರಾಜಕೀಯ ಸ್ವರೂಪದ್ದಾಗಿರಬಹುದು) ಅಂತರರಾಷ್ಟ್ರೀಯ ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಯ ಒಂದು ಪ್ರತ್ಯೇಕಗೊಳಿಸಲಾಗದ ಅಂಗಗಳನ್ನಾಗಿ ಮಾಡುವ ಐತಿಹಾಸಿಕವಾಗಿ ವಸ್ತುನಿಷ್ಠ ಕಾರಣಗಳೇನು ಎಂಬುದನ್ನು ಮೊದಲು ನೋಡೋಣ. ಐತಿಹಾಸಿಕವಾಗಿ ಕಾರ್ಮಿಕ ವರ್ಗಕ್ಕೆ ಜನ್ಮಕೊಟ್ಟಿದ್ದು ಬಂಡವಾಳಶಾಹಿ ವ್ಯವಸ್ಥೆಯೇ. ಮೊದಲು ಯೂರೋಪಿನಲ್ಲಿ 16-17 ಶತಮಾನಗಳ ಸುಮಾರಿನಲ್ಲಿ ಉದಯಿಸಿದ ಬಂಡವಾಳಶಾಹಿ ವ್ಯವಸ್ಥೆಯು ಹತ್ತೊಂಬತ್ತನೆ ಶತಮಾನದ ಪೂರ್ವಾರ್ಧದ ಹೊತ್ತಿಗೆ ಪಶ್ಚಿಮ ಯೂರೋಪಿನ ದೇಶಗಳಲ್ಲಿಯ ಪ್ರಮುಖ ಸಾಮಾಜಿಕ ವ್ಯವಸ್ಥೆಯಾಗಿ ಬೇರೂರಿತು. ತನ್ನ ಹುಟ್ಟಿನಿಂದಲೇ ಉತ್ಪಾದನಾ ಕ್ರಮದಲ್ಲಿ ಹೊಸ ಕ್ರಾಂತಿಕಾರಿ ಪರಿವರ್ತನೆಗಳಿಗೆ ಚಾಲನೆ ನೀಡಿದ ಬಂಡವಾಳಶಾಹಿಯು ಹೊಸ ಸರಕುಗಳ ಉತ್ಪಾದನೆ, ಹೊಸ ಯಂತ್ರತಂತ್ರಗಳ ಶೋಧ ಹಾಗೂ ಬಳಕೆ ಹಾಗೂ ಈ ಔದ್ಯೋಗಿಕ ಕ್ರಾಂತಿಗೆ ಪೂರಕವಾಗಿ ಜ್ಞಾನ ವಿಜ್ಞಾನಗಳ ಪ್ರಗತಿ ಇವುಗಳನ್ನು ಸಾಧಿಸಿತು. ಜೊತೆಗೆಯೇ ಹೊಸ ಮಾರುಕಟ್ಟೆಗಳ ಅವಶ್ಯಕತೆ, ಕಚ್ಚಾಸರಕುಗಳ ಪೂರೈಕೆಯ ಹೊಸ ಮೂಲಗಳ ಅವಶ್ಯಕತೆ ಇವುಗಳಿಂದಾಗಿ ಯೂರೋಪಿನ ಬಂಡವಾಳಶಾಹಿಯು ಏಶಿಯ, ಆಫ್ರಿಕಾ, ದಕ್ಷಿಣ-ಅಮೇರಿಕ ಖಂಡಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿತು. ಭಾರತ, ಬರ್ಮಾ, ಈಜಿಪ್ಟ್, ಕಾಂಗೋ ಮುಂತಾದ ದೇಶಗಳಲ್ಲಿ ಬ್ರಿಟೀಷರ ಅಡಿಯಲ್ಲಿ, ಆಲ್ಜೀರಿಯ, ಮೊರೊಕ್ಕೋ, ಕಾಂಬೋಡಿಯ ಮುಂತಾದ ದೇಶಗಳಲ್ಲಿ ಫ್ರೆಂಚರ ಕೆಳಗೆ, ಅಂಗೋಲಾ, ಮೊಜಾಂಬಿಕ್‌ಗಳಲ್ಲಿ ಪೋರ್ಚುಗೀಸರ ಕೆಳಗೆ, ಬ್ರೆಜಿಲ್‌ನಲ್ಲಿ ಸ್ಪೇನಿಶ್‌ರ ಕೆಳಗೆ, ಈ ರೀತಿ ಜಗತ್ತಿನ ಬಹುಸಂಖ್ಯ ಜನತೆ ತಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಕಳೆದುಕೊಂಡುದಲ್ಲದೇ ವಸಾಹತುವಾದಿಗಳ ಆರ್ಥಿಕ, ಸಾಮಾಜಿಕ ಶೋಷಣೆಯ ಕೆಳಗೆ ಸಿಲುಕಿದರು. ಆದರೆ ಬಂಡವಾಳಶಾಹಿಯು ಬೆಳೆದಂತೆ ಅದು ಈ ವಸಾಹತು ದೇಶಗಳಲ್ಲಿಯೂ ಕೂಡ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಬೀಜಗಳನ್ನು ಬಿತ್ತಿತು ಹಾಗೂ ಹೊಸ ಕಾರ್ಮಿಕವರ್ಗವನ್ನು ಹುಟ್ಟಿಸಿತು. ಅಂದರೆ ಇಲ್ಲಿ ನಾವು ಕಾಣುವುದೇನೆಂದರೆ ಬಂಡವಾಳಶಾಹಿಯು ಜಗತ್ತಿನ ಇತಿಹಾಸದಲ್ಲಿ ಮೊದಲ ಬಾರಿಗೆ ಒಂದು ಜಗದ್ವ್ಯಾಪಿ ಉತ್ಪಾದನಾ ವ್ಯವಸ್ಥೆಯೆಂಬುದನ್ನು. ಉತ್ಪಾದನೆ, ಸಾರಿಗೆ, ವ್ಯಾಪಾರ ಇವುಗಳಿಂದಾಗಿ ಬಂಡವಾಳಶಾಹಿಯು ಮೊಟ್ಟಮೊದಲ ಬಾರಿಗೆ ಜಗತ್ತಿನ ಎಲ್ಲ ದೇಶಗಳನ್ನು ಸಮೀಪ ತಂದಿತು. ಅವೆಲ್ಲವುಗಳಲ್ಲಿ ಒಂದು ವಿಶಿಷ್ಟ ಸಂಬಂಧ ಕಲ್ಪಿಸಿತು (ಸಾಮ್ರಾಜ್ಯವಾದಿ ದೇಶಗಳು ಹಾಗೂ ಪಾರತಂತ್ರ್ಯದಲ್ಲಿ ಸಿಕ್ಕ ವಸಾಹತು ದೇಶಗಳು). ಜೊತೆಗೆಯೇ ವಿಕಸಿತ ಬಂಡವಾಳಶಾಹಿ ದೇಶಗಳಲ್ಲಿ (ಹಾಗೂ ಭ್ರೂಣಾವಸ್ಥೆಯಲ್ಲಿ ವಸಾಹತು ದೇಶಗಳಲ್ಲಿಯೂ ಕೂಡ) ಹೊಸ ಸಾಮಾಜಿಕ ವರ್ಗಗಳನ್ನು (ಬಂಡವಾಳದಾರರ ವರ್ಗ ಹಾಗೂ ಶೋಷಿತ ಕಾರ್ಮಿಕವರ್ಗ) ನಿರ್ಮಾಣಮಾಡಿತು. ಇದರಿಂದಾಗಿ ಜಗತ್ತಿನ ವಿವಿಧ ಸಮಾಜಗಳಲ್ಲಿ ಹೊಸ ಹೊಸ ಪ್ರಶ್ನೆಗಳು ಪರಿಸ್ಥಿತಿಗಳು ನಿರ್ಮಾಣಗೊಂಡರೂ ಕೂಡ, ಅವೆಲ್ಲ ಒಂದು ವ್ಯಾಪಕ ಜಾಗತಿಕ ಪರಿಸ್ಥಿತಿಯ ಅಂಗಗಳಾಗಿ ನಿಂತವು. ಈ ವಿವಿಧ ದೇಶಗಳಲ್ಲಿಯ ಶೋಷಿತ ಜನತೆಯ ಶೋಷಣೆಯ ಸ್ವರೂಪ ಬಾಹ್ಯವಾಗಿ ಬೇರೆಯಾಗಿದ್ದರೂ ಅವೆಲ್ಲವುಗಳನ್ನು ಜೋಡಿಸುವ ಒಂದು ಸಾಮಾನ್ಯ ಶೃಂಖಲೆ ಹುಟ್ಟಿಕೊಂಡಿತು. ಈ ಪರಿಸ್ಥಿತಿಯನ್ನು ಮೊದಲು ಮಾರ್ಕ್ಸ್-ಎಂಗೆಲ್ಸ್ ಹಾಗೂ ನಂತರ ಲೆನಿನ್ ಗುರುತಿಸಿದರು. ಆಧುನಿಕ ಸಮಾಜದಲ್ಲಿಯ ಎಲ್ಲ ಸಮಸ್ಯೆಗಳೂ, ಎಲ್ಲ ವೈರುಧ್ಯಗಳೂ ಒಂದಕ್ಕೊಂದು ಸಂಬಂಧ ಹೊಂದಿವೆಯೆಂಬುದನ್ನು ಹಾಗೂ ಈ ಎಲ್ಲ ವೈರುಧ್ಯಗಳ ಮೂಲ ಬಂಡವಾಳ ಹಾಗೂ ಶ್ರಮ ಇವುಗಳಲ್ಲಿನ ವೈರುಧ್ಯ ಎಂಬುದನ್ನು ಅವರು ಕಂಡುಹಿಡಿದರು. ಮಾರ್ಕ್ಸ್ ಹಾಗೂ ಎಂಗೆಲ್ಸ್‌ರು ಪ್ರಮುಖವಾಗಿ ಇಂಗ್ಲೆಂಡ್ ಹಾಗೂ ಇತರ ಯುರೋಪಿಯನ್ ದೇಶಗಳಲ್ಲಿಯ ಆ ಕಾಲದ ಬಂಡವಾಳಶಾಹಿ ವ್ಯವಸ್ಥೆಯನ್ನು ಕಣ್ಣು ಮುಂದೆ ಇಟ್ಟುಕೊಂಡು ಅಭ್ಯಸಿಸಿದರೂ ಕೂಡ ಅವರು ಗುರುತಿಸಿದ ನಿಯಮಗಳು, ವರ್ಣಿಸಿದ ಕಾರ್ಯಪದ್ಧತಿ ಹಾಗೂ ಅನ್ವೇಷಣಾ ವಿಧಾನಗಳು ಒಟ್ಟು ಬಂಡವಾಳಶಾಹಿ ವ್ಯವಸ್ಥೆಗೆ ಮೂಲಭೂತವಾಗಿ ಹಾಗೂ ಸಾರ್ವತ್ರಿಕವಾಗಿ ಅನ್ವಯವಾಗುತ್ತವೆ. "ತನ್ನ ವ್ಯಾಖ್ಯೆಯಿಂದಲೇ ಈ ವ್ಯವಸ್ಥೆಯು ಜಾಗತಿಕ ವ್ಯವಸ್ಥೆಯಾದುದರಿಂದ ಬಂಡವಾಳ ಹಾಗೂ ಶ್ರಮ ಇವುಗಳಲ್ಲಿನ ವರ್ಗಹೋರಾಟ ಹಾಗೂ ಈ ಹೋರಾಟದ ಅಂತಿಮ ಯಶಸ್ಸನ್ನು ಜಾಗತಿಕ ಮಟ್ಟದಲ್ಲಿಯೇ ಅರ್ಥೈಸಿಕೊಳ್ಳಬೇಕೆಂದು ಅವರು ಮಂಡಿಸಿದರು". ಕೇವಲ ತತ್ವಚಿಂತಕರಾಗಿರದೇ ಕ್ರಾಂತಿಕಾರಿ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲುಗೊಂಡಿದ್ದ ಮಾರ್ಕ್ಸ್ ಮತ್ತು ಎಂಗೆಲ್ಸರು 1864 ರಲ್ಲಿ 'ಇಂಟರ್‌ನ್ಯಾಷನಲ್ ವರ್ಕಿಂಗ್ ಮೆನ್ಸ್ ಅಸೋಸಿಯೇಶನ್' ಎಂಬ ಪ್ರಥಮ ಅಂತರ್‌ರಾಷ್ಟ್ರೀಯ ಕಾರ್ಮಿಕವರ್ಗದ ರಾಜಕೀಯ ಸಂಘಟನೆಯ ಸ್ಥಾಪನೆಯಲ್ಲಿ ಮುಂದಾಳತ್ವ ವಹಿಸಿದರು. ಆ ಸಮಯದಲ್ಲಿ ಕೇವಲ ಯುರೋಪಿನ ಕೆಲವು ವಿಕಸಿತ ದೇಶಗಳಲ್ಲಿಯ ಕಮ್ಯುನಿಸ್ಟ್ ಸಂಘಟನೆಗಳು ಮಾತ್ರ ಒಟ್ಟುಗೂಡಿದವು ಎಂಬುದು ನಿಜವಾದರೂ ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಐಕ್ಯದ ಪಥದಲ್ಲಿಯ ಮೊದಲನೆ ಮೈಲುಗಲ್ಲಾದ್ದರಿಂದ ಇದನ್ನು 'ಪ್ರಥಮ ಇಂಟರ್‌ನ್ಯಾಷನಲ್' ಎಂದು ಗೌರವಿಸಲಾಗುತ್ತದೆ.

ಸುಧೀಂದ್ರ

ಇಪ್ಪತ್ತನೆ ಶತಮಾನದ ಮೊದಲನೆ ದಶಕದಷ್ಟೊತ್ತಿಗೆ ಯುರೋಪಿನಲ್ಲಿಯ ಬಂಡವಾಳಶಾಹಿಯು ಬೆಳೆದು ಗುತ್ತೇದಾರಿ ಸ್ಥಿತಿಯನ್ನು ತಲುಪಿತು. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿಗಳ ಗುತ್ತೇದಾರಿ ಬಂಡವಾಳದಾರರು ತಮ್ಮ ತಮ್ಮ ದೇಶಗಳಲ್ಲಿ ಔದ್ಯೋಗಿಕ ಬಂಡವಾಳದ ಜೊತೆಗೆ ಹಣಕಾಸಿನ ಬಂಡವಾಳದ (ಬ್ಯಾಂಕುಗಳು, ಸಾಲದ ಸಂಸ್ಥೆಗಳು ಇತ್ಯಾದಿ.) ಮೇಲೂ ತಮ್ಮ ಪ್ರಭುತ್ವ ಸ್ಥಾಪಿಸಿದರು. ವಸಾಹತುಗಳನ್ನು ಕೇವಲ ಮಾರುಕಟ್ಟೆಗಳಿಗಾಗಿ ಪರಿಗಣಿಸದೇ ಅವುಗಳಲ್ಲಿ ತಮ್ಮ ಬಂಡವಾಳವನ್ನು ನಿರ್ಯಾತ ಮಾಡಿ ಆ ಮೂಲಕ ಹೆಚ್ಚಿನ ಲಾಭಗಳಿಸಲು ಅವರು ಮಗ್ನರಾದರು. ಇದರಿಂದಾಗಿ ಸಾಮ್ರಾಜ್ಯವಾದಿ ದೇಶಗಳಲ್ಲಿ ತೀವ್ರ ಪೈಪೋಟಿ ಸಾಗಿತು. ಈ ಪೈಪೋಟಿಯಿಂದ ಬಿಕ್ಕಟ್ಟನ್ನು ಬಗೆಹರಿಸಲು ಯುದ್ಧದ ಹೊರತಾಗಿ ಮತ್ತಾವ ಮಾರ್ಗವಿರಲಿಲ್ಲ. ಲೆನಿನ್ನರು ಬಂಡವಾಳಶಾಹಿಯ ಈ ನವೀನ ಅವಸ್ಥೆಯನ್ನು ಗುರುತಿಸಿ, ಅದರ ಸ್ವರೂಪವನ್ನು ಹಾಗೂ ಅದು ಹುಟ್ಟಿಸಿದ ಸಮಸ್ಯೆಗಳನ್ನು ಯುದ್ಧದ ನಂತರ 1920ರಲ್ಲಿ ತನ್ನ 'ಸಾಮ್ರಾಜ್ಯವಾದ: ಬಂಡವಾಳವಾದದ ಉಚ್ಚತಮ ವ್ಯವಸ್ಥೆ' ಎಂಬ ಪುಸ್ತಕದಲ್ಲಿ ವಿವೇಚಿಸಿದರು. ಆದರೆ ಮೊದಲನೆ ಮಹಾಯುದ್ಧ ಶುರುವಾಗುವುದಕ್ಕೆ ಮುನ್ನವೇ ಅದರ ನಿಶ್ಚಿತ ಸಂಕೇತಗಳನ್ನು ಗುರುತಿಸಿ ಅವರು ಅಂತರರಾಷ್ಟ್ರೀಯ ಕಾರ್ಮಿಕವರ್ಗದ ಹಾಗೂ ಕಮ್ಯುನಿಸ್ಟ್ ಸಂಘಟನೆಗಳನ್ನು ಎಚ್ಚರಿಸಿದರು. ಹಾಗೂ ಅವುಗಳಿಗೆ ಐಕ್ಯತೆಯ ಹೋರಾಟ ಸೂತ್ರವನ್ನು ಮಂಡಿಸಿದರು. ಯುದ್ಧಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ದ್ವಿತೀಯ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನಲ್ಲಿಯ ಎಲ್ಲ ಕಮ್ಯುನಿಸ್ಟ್ ಪಕ್ಷಗಳಿಗೆ ಅವರು ಕರೆಯಿತ್ತರು, "ಈ ಮಹಾಯುದ್ಧವು ಸಾಮ್ರಾಜ್ಯವಾದಿ ಶಕ್ತಿಗಳಲ್ಲಿಯ ಪರಸ್ಪರ ವಿರೋಧಿ ಬಣಗಳ ನಡುವಿನ ಕಾದಾಟವಾಗಿದೆ. ಜಗತ್ತಿನ ಸಂಪತ್ತನ್ನು ಲೂಟಿಮಾಡಲು ಯಾವ ದೇಶಗಳ ಬಂಡವಾಳದಾರರಿಗೆ ಹೆಚ್ಚು ಅಧಿಕಾರಬೇಕು ಎಂಬುದನ್ನು ನಿರ್ಧರಿಸಲು ಈ ಕಾದಾಟವಾಗಿದೆ. ತಮ್ಮ ಕಾದಾಟದಲ್ಲಿ ಈ ಶೋಷಕವರ್ಗಗಳು ತಮ್ಮ ತಮ್ಮ ದೇಶಗಳ ಕಾರ್ಮಿಕ ಹಾಗೂ ಇತರ ಶೋಷಿತ ಜನತೆಯನ್ನು ತಮ್ಮ ವರ್ಗಸ್ವಾರ್ಥಕ್ಕಾಗಿ ರಾಷ್ಟ್ರಭಕ್ತಿಯ ಮೋಸದ ಕರೆಕೊಟ್ಟು ಬಳಸುತ್ತಿದ್ದಾರೆ. ಬಂಡವಾಳಶಾಹಿಗಳ ಈ ಕುತಂತ್ರವನ್ನು ಪ್ರತಿಯೊಂದು ದೇಶದಲ್ಲಿಯ ಶ್ರಮಿಕರು ಒಕ್ಕಟ್ಟಿನಿಂದ ವಿರೋಧಿಸುವಂತಾಗಲು ಆಯಾ ದೇಶದಲ್ಲಿಯ ಕಮ್ಯುನಿಸ್ಟ್ ಪಕ್ಷಗಳು ಮುಂದಾಳತ್ವ ವಹಿಸಬೇಕು. ಸಾಮ್ರಾಜ್ಯವಾದಿಗಳ ಈ ವಿಘಾತಕ ಯುದ್ಧವನ್ನು ಯಾದವಿ ಯುದ್ಧವಾಗಿ ಪರಿವರ್ತಿಸಿರಿ. ಎಲ್ಲ ದೇಶಗಳಲ್ಲಿಯ ಕಾರ್ಮಿಕರಿಗೂ ಪವಿತ್ರವಾದ ಒಂದೇ ಒಂದು ಯುದ್ಧವೆಂದರೆ ಜಾಗತಿಕ ಸಮಾಜವಾದಕ್ಕಾಗಿ ಮಾಡಬೇಕಾದ ವರ್ಗಯುದ್ಧ". ದ್ವಿತೀಯ ಇಂಟರ್‌ನ್ಯಾಷನಲ್‌ನಲ್ಲಿ ಬಹುಪಾಲು ನಾಯಕತ್ವವು ಲೆನಿನ್ನರ ಕ್ರಾಂತಿಕಾರಿ ಕರೆಯನ್ನು ದುರ್ಲಕ್ಷಿಸಿ, ಸಂಕುಚಿತ ರಾಷ್ಟ್ರವಾದಕ್ಕೆ ಬಲಿಬಿದ್ದು. ತಮ್ಮ ತಮ್ಮ ದೇಶಗಳಲ್ಲಿಯ ಆಳುವ ವರ್ಗಗಳಿಗೆ ಮಹಾಯುದ್ಧದಲ್ಲಿ ಬೆಂಬಲ ಇತ್ತರು.

ಕಾರ್ಮಿಕವರ್ಗದ ಅಂತರರಾಷ್ಟ್ರವಾದಕ್ಕೆ ಮಹಾದ್ರೋಹ ಬಗೆದ ದ್ವಿತೀಯ ಇಂಟರ್‌ನ್ಯಾಷನಲ್‌ನ ನಾಯಕತ್ವವನ್ನು ಬಲವಾಗಿ ಖಂಡಿಸಿದ ಲೆನಿನ್ನರು, ಹಾಗೂ ಅವರ ನೇತೃತ್ವದಲ್ಲಿಯ ಬೋಲ್ಶೆವಿಕ್ ಪಕ್ಷವು, ರಶಿಯದ ಕ್ರಾಂತಿಯ ಯಶಸ್ಸಿನ ಮರುಗಳಿಗೆಯಿಂದಲೇ ಹೊಸ, ಕ್ರಾಂತಿಕಾರಿ ಜಾಗತಿಕ ಕಮ್ಯುನಿಸ್ಟ್ ಸಂಘಟನಾ ಕೇಂದ್ರವನ್ನು ಸ್ಥಾಪಿಸುವ ಪ್ರಯತ್ನದಲ್ಲಿ ತೊಡಗಿದರು. ಜಾಗತಿಕ ಸಮಾಜವಾದಕ್ಕಾಗಿ, ಕಾರ್ಮಿಕ ವರ್ಗದ ಅಂತಿಮ ಶೋಷಣಾ ಮುಕ್ತಿಗಾಗಿ ಸಾಗಿದ ಹೋರಾಟದ ಪಥದಲ್ಲಿ ರಶಿಯಾದ ಕ್ರಾಂತಿಯು ಮೊದಲಿನ ಹಾಗೂ ಮಹತ್ವದ ಐತಿಹಾಸಿಕ ಹೆಜ್ಜೆ ಮಾತ್ರ. ರಶಿಯಾದ ಕ್ರಾಂತಿಯು ಯೂರೋಪದ ವಿಕಸಿತ ಬಂಡವಾಳಶಾಹಿ ದೇಶಗಳಲ್ಲಿ ಸಮಾಜವಾದಿ ಕ್ರಾಂತಿಗಳಿಗೆ ನಾಂದಿಯಾಗಬೇಕು, ದಾಸ್ಯತ್ವದಿಂದ ಹೊರಬರಲು ಹೋರಾಡುತ್ತಿದ್ದ ವಸಾಹತು ದೇಶಗಳಲ್ಲಿಯ ಅಸಂಖ್ಯ ಜನತೆಗೆ ಸ್ಫೂರ್ತಿ ನೀಡಬೇಕು ಎಂಬುದೇ ಬೋಲ್ಶೆವಿಕರ ಭವ್ಯ ದೃಷ್ಟಿಯಾಗಿತ್ತು. ಅಂತೆಯೇ ಬೋಲ್ಶೆವಿಕರ ಪ್ರಯತ್ನದಿಂದಾಗಿ ಮಾರ್ಚ್ 1919ರಲ್ಲಿ ಮೂರನೆಯ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ಹುಟ್ಟಿಕೊಂಡಿತು. ತೃತೀಯ ಇಂಟರ್‌ನ್ಯಾಷನಲ್‌ನ ಎರಡನೆ ಸಮ್ಮೇಳನದಲ್ಲಿ ಲೆನಿನ್ ಮಂಡಿಸಿದ 'ವಸಾಹತುವಾದದ ಪ್ರಶ್ನೆ'ಯ ಕುರಿತಾದ ತನ್ನ ಪ್ರಸಿದ್ಧ ಸಿದ್ಧಾಂತದಲ್ಲಿ ಸಾಮ್ರಾಜ್ಯವಾದದ ವಿರುದ್ಧ ಜಗತ್ತಿನ ಕಮ್ಯುನಿಸ್ಟ್ ಪಕ್ಷಗಳು ಏಕಶಕ್ತಿಯಿಂದ ಹೋರಾಡಲು ಅಗತ್ಯವಾದ ರಾಜಕೀಯ ಮಾರ್ಗದರ್ಶನವನ್ನು ವಿಶದೀಕರಿಸಿದರು. ಅವರ ಹೇಳಿಕೆಯಂತೆ ವಸಾಹತು ದೇಶಗಳಲ್ಲಿಯ ಜನತೆಯ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ ಹಾಗೂ ವಿಕಸಿತ ಬಂಡವಾಳಶಾಹಿ ದೇಶಗಳಲ್ಲಿಯ ಕಾರ್ಮಿಕವರ್ಗಗಳ ಸಮಾಜವಾದಿ ಕ್ರಾಂತಿಯ ಹೋರಾಟ ಇವುಗಳು ಐತಿಹಾಸಿಕವಾಗಿ ಜೋಡಿಸಲ್ಪಟ್ಟಿವೆ. ಎರಡೂ ಹೋರಾಟಗಳ ಸಾಮಾನ್ಯ ಶತ್ರು ಸಾಮ್ರಾಜ್ಯವಾದವಾಗಿದೆ. ಆದ್ದರಿಂದ ಈ ಹೋರಾಟಗಳಲ್ಲಿ ಪರಸ್ಪರ ಮೇಳ ಸ್ಥಾಪಿಸಲು ಕಮ್ಯುನಿಸ್ಟ್ ಪಕ್ಷಗಳು ದುಡಿಯಬೇಕು.

ಲೆನಿನ್ನನ ನಂತರ 1943ರ ವರೆಗಿನ ತನ್ನ ಅಸ್ತಿತ್ವದಲ್ಲಿ ತೃತೀಯ ಇಂಟರ್‌ನ್ಯಾಶನಲ್ ಅದೇನೇ ತಪ್ಪುಗಳನ್ನು ಮಾಡಿದರೂ ಕೂಡ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಪತಾಕೆಯನ್ನು ದಿಟ್ಟವಾಗಿ ಎತ್ತಿಹಿಡಿಯಿತು. ಸಾಮ್ರಾಜ್ಯವಾದಿ ವ್ಯವಸ್ಥೆಯಲ್ಲಿಯ ಬಿಕ್ಕಟ್ಟು ಮೊದಲನೆ ಮಹಾಯುದ್ಧದಿಂದ ಬಗೆಹರಿಯುವುದರ ಬದಲಾಗಿ ಮತ್ತಷ್ಟು ಉಲ್ಬಣಗೊಂಡಿತು ಎಂಬುದರ ನಿದರ್ಶನವಾಗಿ 1929-30ರಲ್ಲಿ ಮಹಾ ಆರ್ಥಿಕ ಕುಸಿತ (Great Depression), 1933ರಲ್ಲಿ ಜರ್ಮನಿಯಲ್ಲಿ ಹಿಟ್ಲರನ ಅಧಿಕಾರಗ್ರಹಣ ಇವು ಸಂಭವಿಸಿದವು. ವಸಾಹತು ದೇಶಗಳಲ್ಲಿ ರಾಷ್ಟ್ರೀಯ ವಿಮೋಚನಾ ಸಮರವು ಮತ್ತಷ್ಟು ತೀವ್ರಗೊಂಡಿತು. ಎಲ್ಲ ಕಡೆಗಳಿಂದಲೂ ಶತ್ರುಭಾವದ ಸಾಮ್ರಾಜ್ಯವಾದಿಗಳಿಂದ ಸುತ್ತುವರೆಯಲ್ಪಟ್ಟ ಸೋವಿಯೆಟ್ ರಶಿಯಾದ ವಿಜಯಿ ಕ್ರಾಂತಿಯು ಅಪಾರ ಕಷ್ಟಗಳ ಮೂಲಕ ಮುನ್ನಡೆಯಿತು. ತೃತೀಯ ಇಂಟರ್‌ನ್ಯಾಶನಲ್ ಅತ್ಯಂತ ಕ್ಲಿಷ್ಟವಾದ ಇತಿಹಾಸ ಘಟ್ಟದಲ್ಲಿ ಕೆಲಸಮಾಡಬೇಕಾಗಿ ಬಂದರೂ, ಈ ಸಮಯದಲ್ಲಿ ಅನೇಕ ದೇಶಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು ಹೊಸದಾಗಿ ಹುಟ್ಟಿ ಬೆಳೆಯತೊಡಗಿದವು. 1936-39ರ ಅವಧಿಯಲ್ಲಿ ಸ್ಪೈನ್‌ನಲ್ಲಿ ಸರ್ವಾಧಿಕಾರಿ ಫ್ರಾಂಕೋನ ವಿರುದ್ಧ ಸಾಗಿದ ಯಾದವಿ ಕಲಹದಲ್ಲಂತೂ ಕಮ್ಯುನಿಸ್ಟ್ ಚಳುವಳಿಯಲ್ಲಿಯ

ಅಂತರರಾಷ್ಟ್ರೀಯ ಭಾವವು ಧೀರೋದಾತ್ತವಾಗಿ ಪ್ರಕಟವಾಯಿತು. ಸ್ಪೈನ್ ಜನತೆಯ ಚಳುವಳಿಗೆ ಯುರೋಪು ಹಾಗೂ ಜಗತ್ತಿನ ಇತರ ಭಾಗಗಳಲ್ಲಿಯ ಕಮ್ಯುನಿಸ್ಟ್ ಪಕ್ಷಗಳು ನಾನಾ ವಿಧದಿಂದ ಸಹಕರಿಸಿದುದಲ್ಲದೇ, ಅನೇಕ ಕಮ್ಯುನಿಸ್ಟರು ಸ್ಪೈನ್‌ಗೆ ಹೋಗಿ ಹೋರಾಟದಲ್ಲಿ ಬಲಿದಾನವನ್ನು ಗೈದರು. ನಂತರ ಹಿಟ್ಲರನ ನಾಝಿ ದುರಾಕ್ರಮಣ ಜಗತ್ತನ್ನೇ ವಿನಾಶದತ್ತ ಒಯ್ಯುತ್ತಿದ್ದಾಗ ಕಮ್ಯುನಿಸ್ಟ್ ಚಳುವಳಿಯಲ್ಲಿಯ ಅಂತರರಾಷ್ಟ್ರೀಯ ಭ್ರಾತೃಭಾವ ಮತ್ತೊಮ್ಮೆ ಉದ್ದೀಪನಗೊಂಡಿತು. ಅಪಾರ ಹಾನಿಯನ್ನು ಸಹಿಸಿಯೂ (ಸುಮಾರು ಎರಡು ಕೋಟಿ ಸೋವಿಯೆಟ್ ಜನ ಬಲಿಯಾದರು) ಜರ್ಮನಿಯ ನಾಝಿಗಳನ್ನು ಹಿಮ್ಮೆಟ್ಟಿಸಿ ಸೋಲಿಸಿದ ಸೋವಿಯೆಟ್ ರಶಿಯಾದ ಜನತೆ ತನ್ಮೂಲಕ ಕೇವಲ ತನ್ನ ತಾಯ್ನಾಡನ್ನಷ್ಟೇ ರಕ್ಷಿಸಲಿಲ್ಲ. ಇಡೀ ಜಗತ್ತನ್ನು ವಿನಾಶದಿಂದ ತಪ್ಪಿಸಲು ಅದು ಬಹುಮೂಲ್ಯ ಸಹಾಯನೀಡಿತು. ರಶಿಯದ ಕೆಂಪುಸೈನ್ಯವು ಪೂರ್ವ ಯುರೋಪದ ದೇಶಗಳ ಮುಕ್ತಿ ಸಂಗ್ರಾಮದಲ್ಲಿಯೂ ಮಹತ್ತರ ಪಾತ್ರ ವಹಿಸಿತು. ನಾಝಿಗಳನ್ನು ಹತ್ತಿಕ್ಕುವುದಕ್ಕಾಗಿ ಕೇವಲ ಪೋಲಂಡಿನ ನೆಲವೊಂದರಲ್ಲೇ ಆರು ಲಕ್ಷ ರಶಿಯದ ಕೆಂಪುಸೇನೆಯ ಸೈನಿಕರು ಪ್ರಾಣತೆತ್ತರು.

ಎರಡನೆ ಮಹಾಯುದ್ಧದ ನಂತರವೂ ಕೂಡ ಕಾರ್ಮಿಕವರ್ಗದ ಅಂತರರಾಷ್ಟ್ರಭಾವ ಅನೇಕ ಬಾರಿ ಪ್ರದರ್ಶಿತಗೊಂಡಿದೆ. 1950–51ರಲ್ಲಿ ಅಮೇರಿಕನ್ನರು ಕೊರಿಯಾದಲ್ಲಿ ಮಿಲಿಟರಿ ಹಸ್ತಕ್ಷೇಪಮಾಡಿ, ದೇಶವನ್ನು ಇಬ್ಭಾಗಗೊಳಿಸಿ ಕಮ್ಯುನಿಸ್ಟರ ಮೇಲೆ ಹಲ್ಲೆ ಮಾಡತೊಡಗಿದಾಗ ಚೀನದ ಕಮ್ಯುನಿಸ್ಟ್ ಪಕ್ಷವು ಕೊರಿಯನ್ ಜನತೆಗೆ ಶಸ್ತ್ರ, ಸೈನಿಕರನ್ನೊಳಗೊಂಡು ವಿವಿಧ ಬಗೆಯಲ್ಲಿ ನೆರವು ನೀಡಿತು. ವಿಯೆಟ್‌ನಾಮ್-ಕಾಂಬೋಡಿಯದಲ್ಲಿ ಅಮೇರಿಕನ್ ಸಾಮ್ರಾಜ್ಯವಾದಿಗಳು ಅಮಾನವೀಯ ಬಾಂಬ್ ದಾಳಿ ಮಾಡುತ್ತಿದ್ದಾಗ ಭಾರತದಲ್ಲಿಯ ಕಮ್ಯುನಿಸ್ಟರನ್ನೊಳಗೊಂಡು ಜಗತ್ತಿನಾದ್ಯಂತ ಎಲ್ಲ ಕಮ್ಯುನಿಸ್ಟರೂ ಬಲವಾಗಿ ಖಂಡಿಸಿದರು. ಕ್ಯೂಬದ ಕ್ರಾಂತಿಯ(1960) ನಂತರ ಫಿಡೆಲ್ ಕ್ಯಾಸ್ಟ್ರೋ ಹಾಗೂ ಚೆ ಗ್ವೆವಾರಾ ಅವರ ನೇತೃತ್ವದಲ್ಲಿ ಕ್ಯೂಬಾ ಇಡೀ ಲ್ಯಾಟಿನ್ ಅಮೇರಿಕದಲ್ಲಿ ಸಾಮ್ರಾಜ್ಯವಾದಿಗಳ ಕೈಗೊಂಬೆಗಳಾಗಿ ಆಳುವ ಮಿಲಿಟರಿ ಶಕ್ತಿಗಳ ವಿರುದ್ಧ ಹೋರಾಟಕ್ಕೆ ಸ್ಫೂರ್ತಿ ಹಾಗೂ ಪ್ರೋತ್ಸಾಹ ಕೊಟ್ಟಿತು. 1965ರಲ್ಲಿ ಹವಾನಾದಲ್ಲಿ ಲ್ಯಾಟಿನ್ ಅಮೇರಿಕಾ, ಆಫ್ರಿಕಾ ಹಾಗೂ ಏಶಿಯ ಈ ಮೂರು ಖಂಡಗಳ ಕಮ್ಯುನಿಸ್ಟ್ ಕ್ರಾಂತಿಕಾರಿಗಳು 'ಟ್ರೈಕಾಂಟಿನೆಂಟಲ್' ಎಂಬ ಸಮ್ಮೇಳನ ಸೇರಿಸಿ ಕ್ಯೂಬಾ ಅಮೇರಿಕನ್ ಸಾಮ್ರಾಜ್ಯವಾದಿಗಳ ವಿರುದ್ಧ ಐಕ್ಯದಿಂದ ಹೋರಾಡಲು ಕರೆಯಿತ್ತಿತು. 1968ರಲ್ಲಿ ಚೆ ಗ್ವೆವಾರಾ ಹಾಗೂ ಆತನ ಕೆಲವು ಸಂಗಡಿಗರು ತಾವೇ ಸ್ವತಃ ಬೋಲಿವಿಯದ ಮಿಲಿಟರಿ ಸರ್ವಾಧಿಕಾರಿ ಸರಕಾರದ ವಿರುದ್ಧ ಗನಿಮಿ ಹೋರಾಟಕ್ಕೆ (Guerilla Warfare) ಪ್ರಾರಂಭಿಸಿ ಆತ್ಮಸಮರ್ಪಣೆ ಮಾಡಿದರು (ಅವರ ರಾಜಕೀಯ ವಿಧಾನದಲ್ಲಿ ತಪ್ಪುಗಳಿದ್ದರೂ, ಅವರ ಕ್ರಾಂತಿಕಾರಕ ಅಂತರರಾಷ್ಟ್ರಭಾವ ಆದರ್ಶಪ್ರಾಯ ಎಂಬುದರಲ್ಲಿ ಸಂಶಯವಿಲ್ಲ). ಇಂದಿಗೂ ಕ್ಯೂಬಾ ಅಂಗೋಲಾ, ನಿಕಾರಾಗುವಗಳಲ್ಲಿ ಸಲ್ಲಿಸಿದ, ಹಾಗೂ ಎಲ್ ಸಾಲ್ವಡೋರ್‌ನಲ್ಲಿ ಸಲ್ಲಿಸುತ್ತಿರುವ ಸಹಾಯಗಳು ಹೆಮ್ಮೆಪಟ್ಟುಕೊಳ್ಳುವಂಥವಾಗಿವೆ.

ಹೀಗೆ ನಾವು ಅರಿತುಕೊಳ್ಳಬೇಕಾದ ವಿಷಯವೆಂದರೆ, ಇಂದಿನ ಯುಗದಲ್ಲಿ ಎಲ್ಲ ಶೋಷಿತ ಜನತೆಯ ಸಮಸ್ಯೆಗಳ ನಡುವೆ ಇತಿಹಾಸವು ತಾನಾಗಿಯೇ ವಸ್ತುನಿಷ್ಠವಾಗಿ ಸಂಬಂಧ ಏರ್ಪಡಿಸಿದ್ದರೂ ಕೂಡ, ಕಮ್ಯುನಿಸ್ಟರು ಎಲ್ಲೆಡೆಗೂ 'ಪ್ರಜ್ಞಾಪೂರ್ವಕವಾಗಿ' ಶೋಷಿತ ಜನತೆಯ ಹೋರಾಟಗಳ ನಡುವೆ ಐಕ್ಯತೆಯ, ಸಮಾನಧ್ಯೇಯದ, ಸಮಾನ ಕಾರ್ಯಕ್ರಮದ ಸಂಬಂಧ ಏರ್ಪಡಿಸಲೆತ್ನಿಸುತ್ತಾರೆ. ಮಾರ್ಕ್ಸನು ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆಯಲ್ಲಿ ಹೇಳಿದಂತೆ ಕಾರ್ಮಿಕವರ್ಗಕ್ಕೆ ಬೇರೆಬೇರೆ ಪಿತೃಭೂಮಿಗಳಿಲ್ಲ. ಇಡೀ ಜಗತ್ತೇ ಕಾರ್ಮಿಕವರ್ಗದ ಸ್ವನಾಡು ಹಾಗೂ ಇಡೀ ಜಗತ್ತನ್ನು ಗೆಲ್ಲುವುದೇ ಅದರ ಗುರಿ. ಪ್ರತಿಗಾಮಿಗಳು ಮಾರ್ಕ್ಸನ ಈ ಹೇಳಿಕೆಯ ವಿಶಾಲ ಅರ್ಥ ತಿಳಿದುಕೊಳ್ಳದೇ ಕಮ್ಯುನಿಸ್ಟರು 'ದೇಶಭಕ್ತಿ'ಯನ್ನು ನಂಬುವುದಿಲ್ಲ ಮುಂತಾಗಿ ಅಪಪ್ರಚಾರ ಸಾಗಿಸುತ್ತಾರೆ. ಅವರ ಆಪಾದನೆ ಹುರುಳಿಲ್ಲದ್ದು. ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆಯಲ್ಲಿಯೇ ಮಾರ್ಕ್ಸನು ಹೇಳುತ್ತಾನೆ, "ಒಳತಿರುಳಿನಲ್ಲಲ್ಲದಿದ್ದರೂ, ಹೊರ ರೂಪದಲ್ಲಾದರೂ ಸರಿ, ಶ್ರಮಜೀವಿಗಳು ಬಂಡವಾಳಶಾಹಿಯೊಂದಿಗೆ ನಡೆಸುವ ಹೋರಾಟವು ಮೊದಲು ರಾಷ್ಟ್ರೀಯ ಹೋರಾಟವಾಗಿರುತ್ತದೆ". ಇದರರ್ಥವೆಂದರೆ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯಿಂದಾಗಿ ತಾನು ಹುಟ್ಟಿದ ರಾಷ್ಟ್ರದ ಮೇಲೆ ರಾಷ್ಟ್ರೀಯವಾಗಿ (ಎಂದರೆ ಸಾಮ್ರಾಜ್ಯವಾದಿ ಪದ್ಧತಿಯಿಂದಾಗಲಿ, ಅಥವಾ ಇನ್ನೊಂದು ರಾಷ್ಟ್ರದ ಸಂಕುಚಿತ ರಾಷ್ಟ್ರವಾದದಿಂದಾಗಲಿ) ಶೋಷಣೆಯಾಗುತ್ತಿದ್ದರೆ ಕಾರ್ಮಿಕವರ್ಗವು ಇಂಥ ರಾಷ್ಟ್ರೀಯ ಪ್ರಶ್ನೆಗಳನ್ನೂ ಎತ್ತಿಕೊಳ್ಳುತ್ತದೆ. ಆದರೆ ಜೊತೆಗೆಯೇ "ಕಾರ್ಮಿಕವರ್ಗ ತನ್ನ ಸ್ವಂತ ಬಂಡವಾಳಶಾಹಿಯೊಂದಿಗಿನ ತನ್ನ ತಂಟೆಯನ್ನೂ ಇತ್ಯರ್ಥಪಡಿಸಿಕೊಳ್ಳಬೇಕು". ಹೀಗೆ ಆಯಾ ರಾಷ್ಟ್ರಗಳಲ್ಲಿಯ ಕಾರ್ಮಿಕವರ್ಗ ತನ್ನ ರಾಷ್ಟ್ರಕ್ಕಾಗಿ ಹಾಗೂ ತನ್ನ ರಾಷ್ಟ್ರದಲ್ಲಿಯ ಶೋಷಕವರ್ಗಗಳ ವಿರುದ್ಧ ಹೋರಾಟ ಸಾಗಿಸುತ್ತಲೇ ಒಟ್ಟು ಜಗತ್ತಿನಲ್ಲಿ ಸಮಾಜವಾದಿ ವ್ಯವಸ್ಥೆಯ ಸ್ಥಾಪನೆಗಾಗಿ ದುಡಿಯುತ್ತದೆ. ಕಮ್ಯುನಿಸ್ಟರ 'ದೇಶಭಕ್ತಿ'ಯ ಕಲ್ಪನೆಗೂ, ಇತರೆಲ್ಲ ಬಗೆಯ ಪ್ರತಿಗಾಮಿಗಳ ಕಲ್ಪನೆಗೂ ಇರುವ ಮೂಲಭೂತ ಅಂತರವೆಂದರೆ ಕಮ್ಯುನಿಸ್ಟರು ಎಲ್ಲ ವಿಷಯಗಳಂತೆಯೇ 'ರಾಷ್ಟ್ರಭಕ್ತಿ'ಯನ್ನೂ ಕೂಡ ವರ್ಗೀಯ ದೃಷ್ಟಿಕೋನದಿಂದ, ಹಾಗೂ ಜಾಗತಿಕ ಸಮಾಜವಾದದ ಧ್ಯೇಯದ ದೃಷ್ಟಿಕೋನದಿಂದ ನೋಡುತ್ತಾರೆ.

ಇಂದಿನ ಪರಿಸ್ಥಿತಿ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಿಲುವು

ಹಲವಾರು ಕ್ಲಿಷ್ಟಕರವಾದ ಕಾರಣಗಳಿಂದಾಗಿ ಇಂದು ಜಾಗತಿಕ ಕಮ್ಯುನಿಸ್ಟ್ ಚಳುವಳಿಯಲ್ಲಿ ಗಂಭೀರ ಬಿರುಕುಗಳು ನಿರ್ಮಾಣಗೊಂಡಿವೆ. ಕೆಲವು ರಾಷ್ಟ್ರಗಳ ಕಮ್ಯುನಿಸ್ಟ್ ಪಕ್ಷಗಳು (ಅದರಲ್ಲಿಯೂ ದೊಡ್ಡ ಹಾಗೂ ಆಳುವ ಪಕ್ಷಗಳು) ಕೆಲವು ಪ್ರಸಂಗಗಳಲ್ಲಿ ತಮ್ಮ ರಾಷ್ಟ್ರಗಳ ಸಂಕುಚಿತ ಹಿತಗಳಿಗೆ ಪ್ರಾಧಾನ್ಯತೆ ನೀಡಿದ್ದರಿಂದ, ಬಲಪರಿಷ್ಕರಣವಾದ ಹಾಗೂ ಎಡ ಸಾಹಸವಾದಗಳು ಕಂಡುಕೊಂಡಿದ್ದರಿಂದ ಹಾಗೂ ಇನ್ನಿತರ ಐತಿಹಾಸಿಕ ಕಾರಣಗಳಿಂದಾಗಿ ಸಂಭವಿಸಿದ ಈ ಬಿರುಕುಗಳು ಕಾರ್ಮಿಕವರ್ಗದ ಅಂತರರಾಷ್ಟ್ರವಾದಕ್ಕೆ ಭಾರೀ ಧಕ್ಕೆಯನ್ನುಂಟುಮಾಡಿವೆ. ಈ ಮತಭೇದಗಳು ಗಂಭೀರ ಶತ್ರುತ್ವದ ಮಟ್ಟಕ್ಕೂ ಹೋಗಿ ಮುಟ್ಟಿದ್ದರಿಂದ ಜಾಗತಿಕವಾಗಿ ಕಾರ್ಮಿಕವರ್ಗದ ವರ್ಗಶತ್ರುಗಳ ವಿರುದ್ಧದ ಹೋರಾಟದ ಪ್ರಹಾರಶಕ್ತಿ ನಿಜವಾಗಿಯೂ ಕಡಿಮೆಯಾಗಿದೆ. ಈ ಪರಿಸ್ಥಿತಿಯನ್ನು ಆದಷ್ಟು ಬೇಗ ದೂರಗೊಳಿಸುವಂತಾಗಬೇಕು, ಪ್ರತಿಯೊಂದು ಸಮಸ್ಯೆಯನ್ನೂ ಸಮಾಜವಾದ ಹಾಗೂ ಅಂತರರಾಷ್ಟ್ರೀಯವಾದಗಳನ್ನು ಕೇಂದ್ರದಲ್ಲಿಟ್ಟುಕೊಂಡೇ ಪರಿಹರಿಸಲು ಪ್ರಯತ್ನಿಸಬೇಕೆಂದು ನಮ್ಮ ಪಕ್ಷವು ಬಯಸುತ್ತದೆ. ಜೊತೆಗೆಯೇ ಜಾಗತಿಕ ಕಮ್ಯುನಿಸ್ಟ್ ಚಳುವಳಿಯಲ್ಲಿಯ ಮತಭೇದಗಳ ಸಂದರ್ಭದಲ್ಲಿ ನಮ್ಮ ಪಕ್ಷವು ಯಾವುದೇ ಬಣಕ್ಕೆ ಸೇರದೆ, ಸ್ವತಂತ್ರ ಹಾಗೂ ಸಮಾನ ಸ್ಥಾನವನ್ನು ಕಾಪಾಡಿಕೊಂಡು ಬಂದಿದೆ. ಒಟ್ಟಿಗೆ ಎಲ್ಲ ಸಮಾಜವಾದಿಗಳ ಗುಂಪಿನ ಸಮರ್ಥನೆಯಲ್ಲಿ ನಿಲ್ಲುವ ನಮ್ಮ ಪಕ್ಷವು ಈ ಗುಂಪಿನ ಒಳಗಿನ ಮತಭೇದಗಳ ವಿಷಯದಲ್ಲಿ ಮಾತ್ರ ತನ್ನದೇ ಆದ ಸ್ವತಂತ್ರ ನಿಲುವನ್ನು ತಳೆಯುತ್ತ ಬಂದಿದೆ. ಪಕ್ಷದ ಈ ನಿಲುವೇ ಮುಂದೆ ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಪುನರೈಕ್ಯತೆಯ ನಿರ್ಮಾಣದಲ್ಲಿ ಸಹಕಾರಿಯಾಗಬಲ್ಲುದು ಎಂದು ಪಕ್ಷ ನಂಬುತ್ತದೆ.

ಹೀಗಿದ್ದರೂ ಇಂದಿನ ಪರಿಸ್ಥಿತಿಯಲ್ಲಿ ಕಾರ್ಮಿಕವರ್ಗದ ಅಂತರರಾಷ್ಟ್ರವಾದದ ಪತಾಕೆಯನ್ನು ತತ್ವಬದ್ಧವಾಗಿ, ಸತತವಾಗಿ ಎತ್ತಿ ಹಿಡಿಯುವದು ಅತ್ಯವಶ್ಯಕವಾಗಿದೆ. ಅಮೇರಿಕನ್ ಸಾಮ್ರಾಜ್ಯವಾದಿಗಳ ನೇತೃತ್ವದಲ್ಲಿ ಒಟ್ಟು ಸಾಮ್ರಾಜ್ಯವಾದಿ ಶಕ್ತಿಗಳು ಜಗತ್ತಿನ ಎಲ್ಲ ಜನತೆಯ ಸುಖ, ಶಾಂತಿ ಹಾಗೂ ಪ್ರಗತಿಗಳ ಮಾರ್ಗಗಳೆಲ್ಲವನ್ನೂ ಮುಚ್ಚಿಹಾಕಿ ವಿನಾಶದತ್ತ ಜಗತ್ತನ್ನು ಸಾಗಿಸುತ್ತಿವೆ. ಶಸ್ತ್ರಸ್ಪರ್ಧೆ, ಆರ್ಥಿಕ ಸುಲಿಗೆ, ರಾಜಕೀಯ ಕುತಂತ್ರ, ಮಿಲಿಟರಿ ದಬ್ಬಾಳಿಕೆ ಇವುಗಳನ್ನು ನೋಡಿದರೆ ಕಾರ್ಮಿಕವರ್ಗದ ವ್ಯಾಪಕ ಹಾಗೂ ಕ್ರಾಂತಿಕಾರಕ ಐಕ್ಯತೆಯೊಂದೇ ಜಗತ್ತನ್ನು ವಿನಾಶದಿಂದ ತಪ್ಪಿಸುವದು ಸಾಧ್ಯ ಎನ್ನುವದು ಸ್ಪಷ್ಟವಿದೆ. ಭಾರತದಲ್ಲಿ ಕಾರ್ಮಿಕವರ್ಗದ ನೇತೃತ್ವದಲ್ಲಿ ಕ್ರಾಂತಿ ಸಂಭವಿಸುವದು ಭಾರತೀಯ ಶೋಷಕ ವರ್ಗಗಳಿಗಷ್ಟೇ ಅಲ್ಲ, ಕ್ರಮೇಣ ಜಾಗತಿಕ ಶೋಷಕ ವರ್ಗಗಳಿಗೂ ಮರಣಾಂತಿಕ ಪೆಟ್ಟಾಗಿ ಪರಿಣಮಿಸುವದರಲ್ಲಿ ಸಂಶಯವಿಲ್ಲ. ಅಂತೆಯೇ ಆದಷ್ಟು ಬೇಗನೇ ಭಾರತೀಯ ಕಾರ್ಮಿಕವರ್ಗದಲ್ಲಿ ಮತ್ತು ದುಡಿಯುವ ಜನಕೋಟಿಯ ಮಧ್ಯೆ ಜಾತೀಯ, ಪ್ರಾಂತೀಯ ಹಾಗೂ ಭಾಷಾವಾರು ಭೇದಗಳನ್ನು ಮೆಟ್ಟಿನಿಲ್ಲುವ ಐಕ್ಯತೆಯನ್ನು ನಿರ್ಮಾಣಗೊಳಿಸಲು ಹೋರಾಡುತ್ತಿದ್ದಂತೆಯೇ, ಕಮ್ಯುನಿಸ್ಟರು ಕಾರ್ಮಿಕವರ್ಗದ ಅಂತರರಾಷ್ಟ್ರೀಯ ಭ್ರಾತೃಭಾವವನ್ನು ಸತತವಾಗಿ ಪಸರಿಸಬೇಕು. 'ಜಗತ್ತಿನ ಕಾರ್ಮಿಕರೇ ಒಂದಾಗಿ' ಈ ಘೋಷಣೆಯು ದಿನದಿನವೂ ಹೊಸ ರಕ್ತಮಾಂಸಗಳನ್ನು ಪಡೆಯುತ್ತ ಸಾಗಿ ಅದು ಸಂಪೂರ್ಣಸಾಕಾರಗೊಳ್ಳುವ ದಿನ ಹತ್ತಿರ ಬರುವಂತಾಗಲು ನಾವು ಹೆಣಗಬೇಕು.

●

ಡಿ.ಎಫ್.ಎ. ಕಾರ್ಮಿಕರ ಸರ್ವಸದಸ್ಯರ ಸಭೆ

ದಿನಾಂಕ 16-8-81 ರಂದು ದಾಂಡೇಲಿಯ ಲಾಲ್‌ಭಾಯಿ ಸ್ಪೋರ್ಟ್ಸ್ ಕ್ಲಬ್ ಆವರಣದಲ್ಲಿ ಇಲೆಕ್ಟ್ರೋ ಮೆಟಲರ್ಜಿಕಲ್ ಎಂಪ್ಲಾಯೀಸ್ ಯೂನಿಯನ್ನಿನ ಸರ್ವಸದಸ್ಯರ ಸಭೆ ನಡೆಯಿತು. ಕಾಂ. ಮೋಹನ್‌ಪಾರಿಶ್ವಾಡ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಆರಂಭದಲ್ಲಿ ಕಾಂ. ಆರ್.ಜಿ. ಸ್ಥಳೀಕರರು ಸಿ.ಐ.ಟಿ.ಯು. ಧ್ವಜಾರೋಹಣ ಮಾಡಿದರು. ಅತಿಥಿಗಳಾಗಿ WCPM ಎಂಪ್ಲಾಯೀಸ್ ಯೂನಿಯನ್ನಿನ ಉಪಾಧ್ಯಕ್ಷ ಕಾಂ. ರಾಜೇಂದ್ರ ಪ್ರಸಾದ್ ಮತ್ತು ಪ್ರಧಾನ ಕಾರ್ಯದರ್ಶಿ ಕಾಂ. ಉಮೇಶ್ ನಾಯ್ಕರು ಭಾಗವಹಿಸಿದ್ದರು.

ಸಭೆಯು ಪ್ರಾರಂಭವಾಗುವ ಮುನ್ನ ಹಿರಿಯ ಕಾರ್ಮಿಕ ಮುಖಂಡ ಕಾಂ. ಜಿ.ವ್ಹಿ. ಪವಾರರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

ಯೂನಿಯನ್‌ನ ಪ್ರಧಾನ ಕಾರ್ಯದರ್ಶಿಯವರು ವರದಿಯನ್ನು ಮಂಡಿಸಿ ಸಂಘದ ಚಟುವಟಿಕೆ ಬಗ್ಗೆ ವಿವರಿಸಿದರು. 1979 ರಿಂದ 1980 ರ ಒಂದು ವರ್ಷದ ಅವಧಿಯಲ್ಲಿ 126 ದಿವಸಗಳ ಮುಷ್ಕರ ಹಾಗೂ 130 ದಿನಗಳ ಆಡಳಿತವರ್ಗದವರು ಘೋಷಿಸಿದ ಬೀಗಮುದ್ರೆಯ ಅವಧಿಯಲ್ಲಿ ಕಾರ್ಮಿಕರು ದಿಟ್ಟರಾಗಿ ನಿಂತುದನ್ನು ಅವರು ವಿವರಿಸಿದರು. ಈಗ ಸಂಘಟನೆಯಲ್ಲಿ ಸೆಕ್ಯೂರಿಟಿಯವರು, ಸ್ಟಾಫ್‌ನವರು ಸಹ ಬಂದಿದ್ದಾರೆ. ಸಂಘವನ್ನು ಸರಿಯಾಗಿ ನಡೆಸಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯವೆಂದು ಅವರು ತಿಳಿಸಿದರು.

ಕಾಂ. ಆರ್. ಜಿ. ಸ್ಥಳೀಕರರು ಮಾತನಾಡುತ್ತಾ "1959 ರಷ್ಟು ಹಿಂದೆಯೇ ಪ್ರಾರಂಭವಾದ ಈ ಸಂಘಟನೆಯು ನಾನು ದಾಂಡೇಲಿಗೆ ಬರಲು ಒಂದು ಕಾರಣವಾಗಿತ್ತು. ಸತತವಾಗಿ 22ವರ್ಷ ಈ ಸಂಘಟನೆಯನ್ನು ಕೆಂಬಾವುಟದಡಿಯಲ್ಲಿ ನಡೆಸಿಕೊಂಡು ಬರುತ್ತಿರುವುದು ನನಗೆ ಹೆಮ್ಮೆ" ಎಂದರು.

ಕಾಂ. ವ್ಹಿ. ಎನ್. ರೆಡ್ಡಿಯವರು ಯೂನಿಯನ್‌ನ ಲೆಕ್ಕಪತ್ರವನ್ನು ಸಭೆಯಲ್ಲಿ ಮಂಡಿಸಿದರು. ಪ್ರಧಾನ ಕಾರ್ಯದರ್ಶಿಯವರಿತ್ತ ವರದಿಯ ಮೇಲೆ ನಡೆದ ಚರ್ಚೆಯಲ್ಲಿ 18 ಕಾರ್ಮಿಕರು ಪಾಲ್ಗೊಂಡಿದ್ದರು. ಚರ್ಚೆಯ ನಂತರ ವರದಿ ಮತ್ತು ಲೆಕ್ಕಪತ್ರ ಸರ್ವಾನುಮತದಿಂದ ಅಂಗೀಕಾರವಾಯಿತು.

ಕಾಂ. ಟಿ.ಎಸ್. ನಾಯ್ಕರು ಸಂಘದ ಘಟನೆಗೆ ಕೆಲವು ತಿದ್ದುಪಡಿ ಸೂಚಿಸಿದರು. ಅವು ಸ್ವೀಕೃತವಾದವು.

ಕಾರ್ಮಿಕರ ಹಕ್ಕನ್ನು ಹತ್ತಿಕ್ಕುವಂತಹ ರಾಷ್ಟ್ರಪತಿಯವರ ಸಂಪು ನಿಷೇಧಿಸುವ ಸುಗ್ರೀವಾಜ್ಞೆಯನ್ನು ಖಂಡಿಸುವ ಠರಾವನ್ನು ಕಾಂ. ಗುರುಪಾದ ಮರಾಠೆ ಮಂಡಿಸಿದರು.

ನಂತರ 1981-82 ರ ಸಾಲಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಕಾಂ. ಎಸ್. ಕೆ. ಸಾವಂತ್, ಉಪಾಧ್ಯಕ್ಷರಾಗಿ ಕಾಂ. ಆರ್.ಜಿ. ಸ್ಥಳೀಕರ್, ಪ್ರಧಾನ ಕಾರ್ಯದರ್ಶಿಯಾಗಿ ಕಾಂ. ಮೋಹನ್‌ಪಾರಿಶ್ವಾಡಕ, ಸಹಕಾರ್ಯದರ್ಶಿಯಾಗಿ ಕಾಂ. ಟಿ.ಎಸ್.ನಾಯ್ಕ, ಖಜಾಂಚಿಯಾಗಿ ವ್ಹಿ. ಎನ್. ರೆಡ್ಡಿ ಇವರನ್ನೊಳಗೊಂಡ 16 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

●

ಸಂಕ್ಷಿಪ್ತ ಸಮಾಚಾರಗಳು:

ಸಿಂಧನೂರು

ರಾಯಚೂರು ಜಿಲ್ಲೆಯ ಸಿಂಧನೂರಿನ ವಿದ್ಯಾರ್ಥಿಗಳು ಸ್ಥಳೀಯವಾಗಿ ತಮ್ಮ ಕೆಲವು ಕುಂದುಕೊರತೆಗಳನ್ನು ಬಗೆಹರಿಸಲು ಸಂಬಂಧಪಟ್ಟವರಿಗೆ ಮನವಿ ಮಾಡಿಕೊಂಡಿತ್ತು. ಯಾವುದೇ ಕ್ರಮ ಕೈಗೊಳ್ಳದಿದ್ದುದರಿಂದ 27-8-81ರಂದು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಎಸ್. ಎಫ್. ಐ. ಸಿಂಧನೂರು ನಗರ ಸಮಿತಿಯ ನೇತೃತ್ವದಲ್ಲಿ ಬೃಹತ್ ಮೆರವಣಿಗೆ ಹೊರಡಿಸಿದ್ದರು. ಸರಕಾರಿ ಮಹಾ ವಿದ್ಯಾಲಯ, ಸರಕಾರಿ ಕಿರಿಯ ಮಹಾ ವಿದ್ಯಾಲಯ, ಟಿ. ಸಿ. ಹೆಚ್. ಹಾಗೂ ಸರಕಾರಿ ಹೈಸ್ಕೂಲ್, ಸರಕಾರಿ ಹೆಣ್ಣು ಮಕ್ಕಳ ಶಾಲೆಗಳಿಂದ ಪ್ರತ್ಯೇಕ ಪ್ರತ್ಯೇಕ ಮೆರವಣಿಗೆಗಳನ್ನು ಹೊರಡಿಸಲಾಗಿತ್ತು. ಮೆರವಣಿಗೆಗಳು ತಾಲ್ಲೂಕು ಆಫೀಸಿನ ವರಾಂಡದಲ್ಲಿ ಸಮಾವೇಶಗೊಂಡ ನಂತರ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು. ನಂತರ 19 ವಿದ್ಯಾರ್ಥಿಗಳ ಮೊದಲ ತಂಡ ಬೇಡಿಕೆಗಳಿಗೋಸ್ಕರ ಒತ್ತಾಯಿಸಿ ಧರಣಿ ಸತ್ಯಾಗ್ರಹವನ್ನು ಪ್ರಾರಂಭಿಸಿತು. ವಿದ್ಯಾರ್ಥಿಗಳನ್ನುದ್ದೇಶಿಸಿ ಕಾಂ. ಬಿ. ಲಿಂಗಪ್ಪ, ಹೆಚ್. ವಿ. ಗಂಡಿ, ಜಿ. ಎಸ್. ಹಿಟ್ನಳ್ಳಿ, ಬಸವರಾಜ ಕಂಬಳಿ, ಕೆ. ಬಸವರಾಜ, ಪಿ. ವೆಂಕನಗೌಡ ಮತ್ತು ಕಾಂ. ಮೋಹನಕುಮಾರ ಮೊದಲಾದವರು ಮಾತನಾಡಿದರು.

ಬೆಂಗಳೂರು

29-8-81ರಂದು ಬೆಂಗಳೂರಿನ ಶ್ರೀರಾಂಪುರದಲ್ಲಿ ಪ್ರಜಾಪ್ರಭುತ್ವ ಮಹಿಳಾ ಸಂಘಟನೆಯ ಸ್ಥಳೀಯ ಸಮಿತಿಯನ್ನು ಪ್ರಾರಂಭಿಸಲಾಯಿತು. ... ಎನ್ನ ಪ್ರಧಾನಕಾರ್ಯದರ್ಶಿ ಕಾಂ. ಎನ್. ಗಾಯಿತ್ರಿ ದೇವಿಯವರು, ನೆರೆದಿದ್ದ ಮಹಿಳೆಯರನ್ನುದ್ದೇಶಿಸಿ, ಸಂಘಟಿತರಾಗುವ ಅವಶ್ಯಕತೆಯ ಬಗ್ಗೆ ಮಾತನಾಡಿದರು.

... ಸಂಘಟನಾ ಸಮಿತಿಯೊಂದನ್ನು ರಚಿಸಲಾಯಿತು. ... ಸುವರ್ಣ, ಸರೋಜ, ಸುಬ್ಬಲಕ್ಷ್ಮಿ, ಜಯಲಕ್ಷ್ಮಿ ಮತ್ತು ಪುಷ್ಪಾವತಿ ಇವರುಗಳು ಸಂಘಟನಾ ಸಮಿತಿಯ ಸದಸ್ಯರು.

ಗೃಹೋಪಯೋಗಿ ವಸ್ತುಗಳನ್ನು ... ತೊಂದರೆಗಳ ಬಗ್ಗೆ ಚರ್ಚಿಸಿ ನ್ಯಾಯಬೆಲೆಯ ಅಂಗಡಿಗಳ ಮೂಲಕ ... ಒದಗಿಸಬೇಕೆಂದು ಸಮಿತಿ ನಿರ್ಣಯಿಸಿತು.

ಚಿಕ್ಕಬಳ್ಳಾಪುರ

17-8-81ರಂದು ಚಿಕ್ಕಬಳ್ಳಾಪುರ ತಾಲ್ಲೂಕಿನ ... ಎಂಬ ಗ್ರಾಮದಲ್ಲಿ ರೈತಸಂಘವನ್ನು ಪ್ರಾರಂಭಿಸಲಾಯಿತು. ಉದ್ಘಾಟನೆಯನ್ನು ನೆರವೇರಿಸಿದ ತಾಲ್ಲೂಕು ರೈತಸಂಘದ ಅಧ್ಯಕ್ಷ ಕಾಂ. ಎಸ್. ಲಕ್ಷ್ಮಯ್ಯನವರು ಸಣ್ಣ ಸಣ್ಣ ರೈತರೆಲ್ಲಾ ಸಂಘಟಿತರಾಗಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಜಿ. ಪಾಪಣ್ಣ, ಪ್ರಧಾನಕಾರ್ಯದರ್ಶಿ ಕಾಂ. ಲಕ್ಷ್ಮಣರೆಡ್ಡಿಯವರು ಮಾತನಾಡುತ್ತಾ ರೈತಸಂಘದ ಧ್ಯೇಯ್ಯಧೋರಣೆಗಳನ್ನು ಕುರಿತು ವಿವರಿಸಿದರು.

ನಂತರ ರೈತಸಂಘದ ಸ್ಥಳೀಯ ಸಮಿತಿಯೊಂದನ್ನು ರಚಿಸಲಾಯಿತು. ಕೆ. ವೆಂ. ಮುನಿಶಾಮಪ್ಪ, ಬಿ. ರಾಮಯ್ಯ, ತಿರುಮಳಪ್ಪ, ಚಿನ್ನ ಕೃಷ್ಣಯ್ಯನವರನ್ನೊಳಗೊಂಡ 11 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಿ, ಕೃಷ್ಣಯ್ಯನವರನ್ನು ತಾಲ್ಲೂಕು ಕಮಿಟಿಗೆ ಆಯ್ಕೆ ಮಾಡಲಾಯಿತು.

ಕೋಣಿ

ಕುಂದಾಪುರ ತಾಲ್ಲೂಕು ಕೋಣಿ ಗ್ರಾಮದ ಬೀಡಿ ಕಾರ್ಮಿಕರ ವಿಸ್ತೃತ ಸಭೆಯು 22-8-81ರಂದು ಕಾಂ. ಅಬ್ರಹಾಂ ಕರ್ಕಡರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಕಾಂ. ಕೆ.ಶಂಕರ್ ಮತ್ತು ಮಹಾಬಲ ವಡೇರ ಹೋಬಳಿ ಇವರು ಭಾಗವಹಿಸಿದ್ದರು.

ಕಾಂ. ಅಬ್ರಹಾಂ ಕರ್ಕಡ್, ಕೆ. ಶಂಕರ್, ಮಹಾಬಲವಡೇರ ಹೋಬಳಿ ಮತ್ತು ಕಾಂ. ವೆಂಕಟೇಶ ಕೋಣಿ ಇವರುಗಳು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ 12ರೂ. ಕನಿಷ್ಠ ಮಜೂರಿ ನಿಗದಿಯಾಗುವವರೆಗೆ ಹೋರಾಟ ನಡೆಸಲು ಕರೆ ನೀಡಿದರು.

ನಂತರ ಮಹಿಳೆಯರನ್ನು ಹೊಂದಿದ್ದ 11 ಜನರ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಕುಮಾರಿ ಜತ್ತು (ಅಧ್ಯಕ್ಷೆ), ... (ಕಾರ್ಯದರ್ಶಿ), ... (ಜೊತೆ ಕಾರ್ಯದರ್ಶಿ) ... ಲಲಿತ, ರಾಧ, ಸೀತ, ಕೆ. ಜಿ. ಸುಶೀಲ, ನಾಗರತ್ನ, ಗಿರಿಜ, ಲೀಲಾವತಿ ಮತ್ತು ಪಾರ್ವತಿ ಇವರನ್ನು ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ಚುನಾಯಿಸಲಾಯಿತು.

ಬದಿಯಡ್ಕ

ಕೇರಳದ ಕಾಸರಗೋಡು ತಾಲ್ಲೂಕಿನ ಬದಿಯಡ್ಕದಲ್ಲಿ ದಿನಾಂಕ 25ರಂದು ಕೇರಳ ದಿನೇಶ್ ಬೀಡಿ ಮಜೂರರು ಧರಣಿ ಮುಷ್ಕರ ... ಸಾವಿರ ಬೀಡಿಗೆ ಕನಿಷ್ಠ ಕೂಲಿ 12ರೂ. ಸಿಗಬೇಕು, ಕನಿಷ್ಠ ಶೇ. 20 ರಷ್ಟು ಬೋನಸ್ ಕೊಡಬೇಕು ಎಂಬಿತ್ಯಾದಿ ಬೇಡಿಕೆಗಳಿಗೋಸ್ಕರ ಬೀಡಿ ಮಜೂರರು ಸಿ.ಐ.ಟಿ.ಯು.ವಿನ ನೇತೃತ್ವದಲ್ಲಿ ಬದಿಯಡ್ಕ ಪೋಸ್ಟಾಫಿಸಿನ ಎದುರು ಧರಣಿ ಮುಷ್ಕರ ಪ್ರಾರಂಭಿಸಿದರು.

ಮುಷ್ಕರ ಹೂಡಿದ್ದ ಕಾರ್ಮಿಕರನ್ನುದ್ದೇಶಿಸಿ ಕಾಂ. ಚಂದ್ರಶೇಖರ ಮಾತನಾಡಿದರು.

ಬಿ. ಸಿ. ರೋಡ್

ಅಖಿಲಭಾರತ ಬೀಡಿ ಕೆಲಸಗಾರರ ಸಮಿತಿ ನೀಡಿದ ಕರೆಯಂತೆ ದಿನಾಂಕ 25ರಂದು ಬಂಟ್ವಾಳ ತಾಲ್ಲೂಕಿನ ಬಿ. ಸಿ. ರೋಡಿನಲ್ಲಿ ಬೀಡಿ ಕಾರ್ಮಿಕರ ಬೃಹತ್ ಮತಪ್ರದರ್ಶನ ನಡೆಯಿತು. ಹಾಗೂ ತಾಲ್ಲೂಕು ತಹಸೀಲ್ದಾರರ ಮುಖಾಂತರ ಕೇಂದ್ರ ಕಾರ್ಮಿಕ ಮಂತ್ರಿಗೆ ಬೇಡಿಕೆಗಳನ್ನೊಳಗೊಂಡ ಮನವಿ ಸಲ್ಲಿಸಲಾಯಿತು.

ಪತ್ರಿಕಾ ಕರೆ

ಶಂಭೂರು

ದ. ಕ. ಜಿಲ್ಲೆಯ ನರಿಕೊಂಬು ಮತ್ತು ಶಂಭೂರು ಗ್ರಾಮಗಳ ರೈತಸಂಘದ ಕಾರ್ಯಕರ್ತರ ಸಭೆಯೊಂದು 21-8-81ರಂದು ಶಂಭೂರಿನಲ್ಲಿ ಬಿ. ಶಿವಪ್ಪ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾರಂಭದಲ್ಲಿ ಬಂಟ್ವಾಳ ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಬಿ. ನಾರಾಯಣರು ರೈತಸಂಘಟನೆಯ ಅವಶ್ಯಕತೆಯ ಬಗ್ಗೆ ತಿಳಿಸಿದರು.

ದ. ಕ. ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಯು. ಜನಾರ್ಧನ ನಾಯಕ್, ಕಾಂ. ಬಿ. ವಾಸುಗಟ್ಟಿ ಮೊದಲಾದವರು ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದರು.

ಕುಂದಾಪುರ

ದ. ಕ. ಜಿಲ್ಲೆಯ ಕುಂದಾಪುರದಲ್ಲಿ 25-8-81ರಂದು ಕುಂದಾಪುರ ಕೆಲಸಗಾರರ ಸಂಘ (ಸಿ.ಐ.ಟಿ.ಯು.) ದ ನೇತೃತ್ವದಲ್ಲಿ ಬೀಡಿಕಾರ್ಮಿಕರು ಬೃಹತ್ ಸಂಖ್ಯೆಯಲ್ಲಿ ಮೆರವಣಿಗೆ ಹೊರಡಿಸಿ, ಕುಂದಾಪುರ ತಹಸೀಲ್ದಾರರಿಗೆ ಮನವಿಯನ್ನು ಕೇಂದ್ರಸರಕಾರದ ಕಾರ್ಮಿಕ ಮಂತ್ರಿಗೆ ಕಳುಹಿಸುವಂತೆ ಅರ್ಪಿಸಿದರು.

ಸಾವಿರ ಬೀಡಿಗೆ ಹನ್ನೆರಡು ರೂ. ಕನಿಷ್ಠ ಕೂಲಿ ನಿಗದಿ, ಬೀಡಿ ಮಜೂರರ ಹಿತರಕ್ಷಣಾ ಕಾನೂನು ಜಾರಿಗೊಳಿಸುವುದು, ಕಂಟ್ರಾಕ್ಟ್ ಪದ್ಧತಿ ರದ್ಧತಿ ಇವೇ ಮೊದಲಾದ ಹನ್ನೆರಡು ಬೇಡಿಕೆಗಳು ಮನವಿಪತ್ರದಲ್ಲಿ ನಮೂದಿಸಲ್ಪಟ್ಟಿತ್ತು.

ನಂತರ ನಡೆದ ಸಭೆಯನ್ನುದ್ದೇಶಿಸಿ ಕಾಂ. ಶಂಕರ್, ಸಿ. ನಾರಾಯಣ ಮೊದಲಾದವರು ಮಾತನಾಡಿದರು. ಆರಂಭದಲ್ಲಿ ವಿ. ಮಹಾಬಲ ಸ್ವಾಗತಿಸಿದರು.

●

"ಕೊಲೆಗಾರರ ಸ್ವರ್ಗ" – ಗ್ವಾಟೆಮಾಲಾ

(3ನೇ ಪುಟದಿಂದ)

ನಿಯಾದಿಂದ ಹೊರದಬ್ಬಿದವು. ಮಾತ್ರವಲ್ಲ, ರುಮಾನಿಯಾದ ಸಶಸ್ತ್ರ ಸೈನ್ಯಗಳು ಹಂಗೇರಿ, ಜೆಕೋಸ್ಲೋವಾಕಿಯಾದ ವಿಮೋಚನೆ ಹಾಗೂ ಅಗ್ಗಿಯಾದ ಯುದ್ಧಗಳಲ್ಲಿ ಭಾಗವಹಿಸಿ ನಾಝೀಗಳನ್ನು ಸಂಪೂರ್ಣವಾಗಿ ಸೋಲಿಸಿದವು.

ವಿಮೋಚನಾನಂತರದ ವರುಷಗಳು ಸಾಮಾಜಿಕ ಸುಧಾರಣೆಯ ಕಾಲ. 1946ರ ಪ್ರಥಮ ಪ್ರಜಾಸತ್ತಾತ್ಮಕ ಚುನಾವಣೆಯಲ್ಲಿ ಪ್ರಜಾಪ್ರಭುತ್ವವಾದೀ ಪಕ್ಷಗಳು ಅಗಾಧ ಯಶಸ್ಸು ಪಡೆದವು. 1947ರ ಡಿಸೆಂಬರ್ 30 ರಂದು ರಾಜರ ಆಡಳಿತವನ್ನು ಕೊನೆಗೊಳಿಸಿ 'ರುಮಾನಿಯಾ ಜನತಾ ಗಣರಾಜ್ಯ' ಸ್ಥಾಪನೆಗೊಂಡಿತು. 1948ರಲ್ಲಿ ಉತ್ಪಾದನಾ ಸಾಧನಗಳ ರಾಷ್ಟ್ರೀಕರಣ, ಕೃಷಿ ಸಹಕಾರೀಕರಣ ನಡೆಯಿತು. ಜನವಾದೀ ಕ್ರಾಂತಿಯಿಂದ ಸಮಾಜವಾದೀ ಕ್ರಾಂತಿಯ ಕಡೆಗೆ ಹಲವು ಹಂತಗಳನ್ನು ದಾಟಿದ ನಂತರ ರುಮಾನಿಯಾ ಜನತೆ ಸಮಾಜವಾದೀ ಅಭಿವೃದ್ಧಿ ಮಾರ್ಗವನ್ನು ಆರಿಸಿಕೊಂಡು ಸಮಾಜವಾದದ ಆಧಾರ ನಿರ್ಮಾಣ ಹಾಗೂ ಹೊಸ ವ್ಯವಸ್ಥೆಯ ಕ್ರೋಢೀಕರಣದೆಡೆಗೆ ... ಗಮನಹರಿಸಿತು. ಆಗಸ್ಟ್ 1944ರ ಕ್ರಾಂತಿಕಾರೀ ಘಟನೆಗಳ ನಂತರ ದುರ್ಬಲ ಆರ್ಥಿಕತೆಯ, ಕೃಷಿಪ್ರಧಾನ ದೇಶ ರುಮಾನಿಯಾ ಬಲಿಷ್ಠ ಕೈಗಾರಿಕಾ-ಕೃಷಿ ಆರ್ಥಿಕತೆಹೊಂದಿರುವ ದೇಶವಾಗಿ ಪರಿವರ್ತನೆಗೊಂಡಿತು. ಈ ಅವಧಿಯಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಜನರ ಜೀವನಮಟ್ಟ ಬಹಳ ಹೆಚ್ಚಿತು. ಕನಿಷ್ಠ ಮತ್ತು ಗರಿಷ್ಠ ಆದಾಯದ ಅಂತರ 1:5 ಕ್ಕಿಳಿಯಿತು. ದುಡಿಯುವ ಜನತೆ ದೇಶದ ಆಡಳಿತದಲ್ಲಿ ಹೆಚ್ಚೆಚ್ಚು ಭಾಗ ವಹಿಸುವಂತಾಯಿತು.

ರುಮಾನಿಯಾ ಅಂತರರಾಷ್ಟ್ರೀಯ ವ್ಯವಹಾರಗಳಲ್ಲೂ ಸಕ್ರಿಯವಾಗಿ ಭಾಗವಹಿಸಿ ಅಂತರರಾಷ್ಟ್ರೀಯ ಭರವಸೆ ಹಾಗೂ ಭದ್ರತೆ ಹೆಚ್ಚಿಸುವ ಪ್ರಯತ್ನಗಳಲ್ಲಿ ಭಾಗಿಯಾಗುತ್ತಿದೆ. ರುಮಾನಿಯಾದ ಅಧ್ಯಕ್ಷ ಚಿಸೆಸ್ಕು ಹೇಳಿರುವಂತೆ ಜಗತ್ತಿನಲ್ಲಿ ನಾವೀಗ ಎರಡು ಪರಸ್ಪರ ವಿರೋಧೀ ಪ್ರವೃತ್ತಿಗಳನ್ನು ಕಾಣಬಹುದು. ಒಂದೆಡೆ ಒಡಂಬಡಿಕೆ, ಸ್ವಾತಂತ್ರ್ಯ, ಸಹ ಅಸ್ತಿತ್ವ ಹಾಗೂ ಶಾಂತಿಯ ಪ್ರವೃತ್ತಿ; ಇನ್ನೊಂದೆಡೆ, ಶಕ್ತಿ ಪ್ರದರ್ಶನದ, ಆಕ್ರಮಣದ, ಯುದ್ಧದ, ದೇಶಗಳ ಸ್ವಾತಂತ್ರ್ಯ ಹಾಗೂ ಸ್ವಾವಲಂಬನೆಯನ್ನು ಮುರಿಯಬೇಕೆನ್ನುವ ಪ್ರವೃತ್ತಿ. ಸ್ವಾಭಾವಿಕವಾಗಿಯೇ ರುಮಾನಿಯಾ ಜಾಗತಿಕ ಪರಿಸ್ಥಿತಿ ಹದಗೆಡದಂತೆ ಈ ಮೊದಲನೇ ಪ್ರವೃತ್ತಿ ಮುಂದುವರಿಯುವಂತೆ ಎಲ್ಲಾ ದೇಶಗಳ ಜನತೆಯ ಹಾಗೂ ಪ್ರಗತಿಪರ ಶಕ್ತಿಗಳ ಐಕ್ಯತೆ ಹಾಗೂ ಸಹಭಾಗಿತ್ವಕ್ಕಾಗಿ ಪ್ರಯತ್ನಿಸುತ್ತಿದೆ. ○

ರೈತ ಪ್ರತಿನಿಧಿ ಸಭೆ

19-8-1981ರಂದು ಮಂಗಳೂರಿನ ಕೋಣಾಜೆ ಅಸೈಗೋಳಿಯಲ್ಲಿ ಕೋಟೆಕಾರ್ ಸರ್ಕಲ್ ರೈತರ ಪ್ರತಿನಿಧಿ ಸಭೆಯು ಶ್ರೀ ಪದ್ಮಯ್ಯ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾರಂಭದಲ್ಲಿ ಪ್ರತಿನಿಧಿಗಳನ್ನು ಸ್ವಾಗತಿಸಿ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ವರದಿಯನ್ನಿತ್ತರು. ವರದಿಯ ಮೇಲೆ ಚರ್ಚೆ ನಡೆದು ಸರ್ವಾನುಮತದಿಂದ ಅಂಗೀಕಾರವಾಯಿತು. ನಂತರ ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಜಿ. ಕೃಷ್ಣಪ್ಪನವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಯು. ಜನಾರ್ಧನ ನಾಯಕರು ರೈತಸಂಘವನ್ನು ಬಲಪಡಿಸುವ ಅವಶ್ಯಕತೆಯನ್ನು ಒತ್ತಿಹೇಳಿದರು. ನಂತರ 19ಜನರುಳ್ಳ ಸರ್ಕಲ್ ಸಮಿತಿಯನ್ನು, ಬಿ. ಬಾಬು ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಕೆ. ಉಗ್ರಪ್ಪಶೆಟ್ಟಿ, ಕಾರ್ಯದರ್ಶಿಯಾಗಿ ರಾಮಚಂದ್ರ ಉಚ್ಚಿಲ, ಜೊತೆಕಾರ್ಯದರ್ಶಿಯಾಗಿ ಎನ್. ಕೃಷ್ಣಪ್ಪಶೆಟ್ಟಿ ಚುನಾಯಿಸಲಾಯಿತು.

ಈ ಕೆಳಗಿನ ಠರಾವುಗಳನ್ನು ಸಭೆಯು ಅಂಗೀಕರಿಸಿತು.

1. ಅಗತ್ಯಸೇವಾ ಸುಗ್ರೀವಾಜ್ಞೆಯನ್ನು ಕೂಡಲೇ ವಾಪಸ್ ತೆಗೆದುಕೊಳ್ಳಬೇಕು.

2. ಉಳ್ಳಾಲ ರೈಲ್ವೆ ಸುಕದಿಂದ ಸಾರ್ವಜನಿಕರಿಗೆ ಹೋಗುವ ದಾರಿಯನ್ನು ಸರಕಾರ ಈ ಕೂಡಲೇ ವ್ಯವಸ್ಥೆ ಮಾಡಬೇಕು.

3. ನೆರೆಪರಿಹಾರಕ್ಕೆ ಸರಕಾರವು ಕೊಟ್ಟಿರುವ ಸಾಲವನ್ನು ಮಾಫಿಮಾಡಬೇಕು.

4. ದರಖಾಸ್ತು ಭೂಮಿಯನ್ನು ರೈತರಿಗೆ ಖಾಯಂಗೊಳಿಸಬೇಕು.

5. ಇತ್ತೀಚೆಗೆ ಮುನ್ನೂರಿನಲ್ಲಿ ಬಿರುಗಾಳಿಯಿಂದ ನಷ್ಟಕ್ಕೊಳಗಾದವರಿಗೆ ಕೂಡಲೇ ಪರಿಹಾರ ಒದಗಿಸಬೇಕು.

●

ಭ್ರಷ್ಟಾಚಾರಿ ಅಂತುಳೆ

(1ನೇ ಪುಟದಿಂದ)

ಳನ್ನು ಅಂತುಳೆಗೆ ಒಪ್ಪಿಸಿರುವುದಾಗಿ ಮಾಜೀ ಕಾನೂನು ಸಚಿವೆ ಶಾಲಿನಿ ತಾಯಿ ಪಾಟೀಲ ಸಂದರ್ಶನವೊಂದರಲ್ಲಿ ತಿಳಿಸಿದ್ದಾರೆ. (ಇಂದಿರಾ ಪ್ರತಿಭಾ ಪ್ರತಿಷ್ಠಾನ ಹಾಗೂ ಇತರ ಟ್ರಸ್ಟ್‌ಗಳಿಗೆ ಮಂತಿಗೆ ಸಂಗ್ರಹ ಕುರಿತು ವಿವಾದವೆದ್ದಿರುವುದರಿಂದ ಸಂಗ್ರಹಗೊಂಡ ಹಣವನ್ನು ಆಯಾ ಜನರಿಗೆ ಒಪ್ಪಿಸಬೇಕೆಂದು ಬಹಿರಂಗ ಹೇಳಿಕೆ ನೀಡಿದ ಅಪರಾಧಕ್ಕಾಗಿ ಶ್ರೀಮತಿ ಪಾಟೀಲರನ್ನು ಅಂತುಳೆ ತಮ್ಮ ದೆಹಲಿ ಭೇಟಿಯ ನಂತರ ವಜಾಗೊಳಿಸಿದ್ದಾರೆ).

ತಮ್ಮ ಅಧಿಕಾರ ಸ್ಥಾನವನ್ನು ನಿರ್ಲಜ್ಜವಾಗಿ ಹಣ ಸಂಗ್ರಹಿಸಲು ಖದೀಮ ಅಂತುಳೆ ಬಳಸಿಕೊಂಡಿದ್ದಾರೆ. ಇದಕ್ಕೆಲ್ಲ ಇಂದಿರಾಗಾಂಧಿಯವರ ಬೆಂಬಲವಿದೆಯೋ ಎಂಬುದನ್ನು ತಿಳಿಯಲು ದೇಶದ ಜನ ಕಾತುರಗೊಂಡಿದ್ದಾರೆ.

ಪೂರ್ತಿ ಹಗರಣ ಬಯಲಿಗೆ ಬಿದ್ದ ನಂತರ, ಇಂದಿರಾ ಪ್ರತಿಭಾ ಪ್ರತಿಷ್ಟಾನದ ಹೆಸರಿನಲ್ಲಿ "ಇಂದಿರಾ" ಶಬ್ದ ಕೈಬಿಡಲು ಈ ದರೋಡೆಖೋರ ಯೋಚಿಸಿದ್ದಾನಂತೆ. ಈಗಾಗಲೇ ಅಂತುಳೆ ಸಂಗ್ರಹಿಸಿರುವ ಹಣ 5ಕೋಟಿ ರೂ. ಅವನ ಗುರಿ 125 ಕೋಟಿ ರೂ.

ಸಂಸತ್‌ನಲ್ಲಿ ಕೋಲಾಹಲ

ಅಂತುಳೆ ನಿಧಿ ಸಂಗ್ರಹ ಕುರಿತ ವಿವಾದವು ಸಂಸತ್ತಿನ ಉಭಯ ಸದನಗಳಲ್ಲೂ ಕೋಲಾಹಲವನ್ನೇ ಹುಟ್ಟಿಸಿದೆ. ಈ ವಿಷಯ ಕುರಿತ ನಿಲುವಳಿ ಸ್ವೀಕರಿಸಲು ಲೋಕಸಭಾಧ್ಯಕ್ಷರು ನಿರಾಕರಿಸಿದ್ದರಿಂದ ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು. ರಾಜ್ಯಸಭೆಯಲ್ಲಿ ವಿವಾದ ಕುರಿತು ಗಮನ ಸೆಳೆಯುವ ಸೂಚನೆಯನ್ನು ಚರ್ಚಿಸಲು ರಾಜ್ಯಸಭಾಪತಿ ಮೊದಲ ದಿನ ಒಪ್ಪಿದ್ದರೂ ಮರುದಿನ ಕಾರ್ಯಕ್ರಮ ಪಟ್ಟಿಯಲ್ಲಿ ವಿಷಯ ಇರಲೇ ಇಲ್ಲ.

ಲೋಕಸಭೆಯಲ್ಲಿ, ರಾಜ್ಯಸಭೆಯಲ್ಲಿ ಖದೀಮ ಅಂತುಳೆಯನ್ನು ಸರಕಾರ ಸಮರ್ಥಿಸಿಕೊಳ್ಳಲೂ ಸಾಧ್ಯವಿದೆ. ಪ್ರಧಾನಿಯ ಪ್ರತಿಕ್ರಿಯೆ ಇನ್ನೂ ಲಭ್ಯವಾಗಿಲ್ಲ. ಈ ಶತಮಾನದ ಭಾರೀ ವಂಚನಾ ಪ್ರಕರಣವಾಗಿರುವ, ಬಡವರಿಗಾಗಿ ನಿಧಿ ಸಂಗ್ರಹಿಸಿರುವ ಅಂತುಳೆಯನ್ನು ಉಚ್ಚಾಟಿಸುವವರೆಗೂ ದೇಶದ ಜನತೆ ಹೋರಾಡಬೇಕು. ಅಂತುಳೆಗೆ ಮುಖ್ಯಮಂತ್ರಿಯ ಸ್ಥಾನದಿಂದ ಉಚ್ಚಾಟನೆಯೊಂದೇ ಸಾಲದು. ಯೋಗ್ಯ ಶಿಕ್ಷೆಯಾಗಬೇಕು.

●

ರೈತ ಜಾಥಾ

ಕೇಂದ್ರ ಸರಕಾರವು ರಬ್ಬರ್, ಕೋಕೋ, ಕೊಬ್ಬರಿ ಇತ್ಯಾದಿ ಕೃಷಿ ಉತ್ಪನ್ನ ವಸ್ತುಗಳನ್ನು ವಿದೇಶದಿಂದ ಆಮದುಗೊಳಿಸಲು ತೀರ್ಮಾನಿಸಿದೆ. ಈ ತೀರ್ಮಾನದಿಂದಾಗಿ ತಮ್ಮ ಉತ್ಪನ್ನಗಳಿಗೆ ಬೆಲೆ ಕುಸಿದು ನಷ್ಟವನ್ನು ಅನುಭವಿಸುತ್ತಿರುವ ಕೇರಳದ ರೈತರು ಕೇರಳ ರೈತಸಂಘದ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ನೀತಿಗೆದುರಾಗಿ ಜಾಥಾವನ್ನು ಸಂಘಟಿಸಿದರು. ಈ ಜಾಥಾವನ್ನು ಆಗಸ್ಟ್ 12ರಂದು ಕಣ್ಣಾನೂರಿನ ಅಲ್‌ಕ್ಕೊಡಿನಲ್ಲಿ ಕಾಂ. ಪಿ. ಕುಂಞರಾಮನ್‌ರು ಉದ್ಘಾಟಿಸಿದರು.

ಕಾಂ. ಕೃಷ್ಣಪಿಳ್ಳೆ ದಿನಾಚರಣೆಯಾದ ಆ. 19ರಂದು ಈ ಜಾಥಾ ಕಾಸರಗೋಡು ತಾಲ್ಲೂಕಿನ ಬದಿಯಡ್ಕಕ್ಕೆ ತಲುಪಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸ್ಥಳೀಯ ಘಟಕದ ಕಾರ್ಯದರ್ಶಿ ಕಾಂ. ಬಿ. ಚಂದ್ರಶೇಖರನ್‌ರ ನೇತೃತ್ವದಲ್ಲಿ ಜಾಥಾವನ್ನು ಸ್ವಾಗತಿಸಲಾಯಿತು.

●

ರಾಜ್ಯದಲ್ಲಿ ಕೇರಳ ಮುಖ್ಯಮಂತ್ರಿಯವರ ಕಾರ್ಯಕ್ರಮ

ಕೇರಳ ರಾಜ್ಯದ ಮುಖ್ಯಮಂತ್ರಿ ಕಾಂ. ಇ. ಕೆ. ನಾಯನಾರ್ ಅವರು ಸೆಪ್ಟೆಂಬರ್ 13ರಂದು ಬೆಂಗಳೂರಿಗೆ ಆಗಮಿಸಿ ತಾರೀಕು 14 ಮತ್ತು 15ರಂದು ಬೇರೆಬೇರೆ ಕಡೆಗಳಲ್ಲಿ ಸಾರ್ವಜನಿಕ ಸಭೆಗಳಲ್ಲಿ ಭಾಷಣಮಾಡಲಿರುವರು. 14ರಂದು ಬೆಳಿಗ್ಗೆ 9-30ಕ್ಕೆ ತುಮಕೂರಿನಲ್ಲಿಯೂ, ಸಂಜೆ 6-30ಕ್ಕೆ ಬೆಂಗಳೂರಿನಲ್ಲಿಯೂ, 15ರಂದು ಸಂಜೆ 6-30ಕ್ಕೆ ಮೈಸೂರಿನಲ್ಲಿಯೂ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಭಾಷಣಮಾಡಲಿರುವರು.

ಬೆಂಗಳೂರಿನ ಬೇರೆಬೇರೆ ಕೇರಳೀಯ ಸಂಘಸಂಸ್ಥೆಗಳು ಸಂಘಟಿಸುವ ಒಂದೆರಡು ಕಾರ್ಯಕ್ರಮಗಳಲ್ಲಿಯೂ ಕಾಂ. ಇ.ಕೆ. ನಾಯನಾರ್ ಭಾಗವಹಿಸಲಿರುವರು.

ಸಂಪಾದಕೀಯ

(1ನೇ ಪುಟದಿಂದ)

ಸರಕಾರದ ಈ ಪ್ರತಿಗಾಮಿ ಜನವಿರೋಧಿ ನೀತಿಯನ್ನೆದುರಿಸಲು ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳೂ ಮುಂದೆ ಬಂದಿರುವುದು ಸ್ವಾಗತಾರ್ಹವಾಗಿದೆ. ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರ ರಾಜ್ಯಸರಕಾರಗಳು ಜನತೆಯು ಈ ಹೋರಾಟಕ್ಕೆ ಮುಂಚೂಣಿಯಾಗಿ ನಿಂತಿವೆ. ಎಲ್ಲ ಸಾಮೂಹಿಕ ಸಂಘಟನೆಗಳೂ, ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳೂ ತಮ್ಮೊಳಗಿನ ಮತಭೇದಗಳನ್ನು ಬದಿಗಿಟ್ಟು ಒಂದಾಗಿ ತೀವ್ರ ರೀತಿಯಲ್ಲಿ ಹೋರಾಡುವರೆಂದು ನಂಬುತ್ತೇವೆ.

ದೇವರಾಜ್ ಅರಸುರವರು ರಾಜ್ಯದ ಕಾಂಗ್ರೆಸ್ (ಎಸ್) ಘಟಕದ ಅಧ್ಯಕ್ಷರಾಗಿ ಬಂದಿರುವುದು ಈ ಸಂದರ್ಭದಲ್ಲಿ ಗಮನಾರ್ಹವಾಗಿದೆ. ಅವರು ಇತರ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೊಂದೊಳಗೂಡಿಕೊಳ್ಳುತ್ತಾರುತ್ತಿರುವ ಕಾಂಗ್ರೆಸ್ ಸರಕಾರದ ವಿರುದ್ಧ ಹೋರಾಡಲು ಮುಂದೆ ಬರಲೆಂದು ನಮ್ಮ ಹಾರೈಕೆ. ○

ಅಂಗೋಲಾದ ಮೇಲೆ ದಾಳಿ

(1ನೇ ಪುಟದಿಂದ)

ಫ್ರಾನ್ಸ್ ವಿರೋಧಿಸಿದ್ದು ಗಮನಾರ್ಹ ಬೆಳವಣಿಗೆ.

ಇತ್ತೀಚೆಗೆ ಅಮೇರಿಕಾವು ಲೀಬ್ಯಾದ ವಿಮಾನಗಳನ್ನು ಉರುಳಿಸಿದೆ. ಕ್ಯೂಬಾದ ಗಡಿಭಾಗಗಳಲ್ಲಿ ಸೈನ್ಯ ಜಮಾವಣೆ ಮಾಡುತ್ತಿದೆ. ಅಮೇರಿಕಾದ ಈ ಎಲ್ಲ ಕ್ರಮಗಳು ಉದ್ವೇಗವನ್ನು ಹುಟ್ಟಿಸಲು ಸಹಕಾರಿಯಾಗಿವೆ.

ವಿಶ್ವಸಂಸ್ಥೆಯ ರಕ್ಷಣಾ ಸಮಿತಿಯು ದಕ್ಷಿಣ ಆಫ್ರಿಕಾದ ವರ್ಣೀಯ ಸರಕಾರದ ಆಕ್ರಮಣ ನೀತಿಯನ್ನು ತೀವ್ರವಾಗಿ ಖಂಡಿಸಬೇಕು, ಎಲ್ಲ ನಿರ್ಬಂಧಗಳನ್ನು ಹಾಕಿ ಅಂಗೋಲಾದಲ್ಲಿ ಜಮಾವಣೆಯಾಗಿರುವ ದಕ್ಷಿಣ ಆಫ್ರಿಕಾದ ಪಡೆಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಬೇಕೆಂದು ಪಿ. ಬಿ. ಒತ್ತಾಯಿಸಿದೆ. ವಿಶ್ವಸಂಸ್ಥೆಯ ತೀರ್ಮಾನಗಳನ್ನು ಮನ್ನಿಸಿ ದಕ್ಷಿಣ ಆಫ್ರಿಕೆಯು ನಮೀಬಿಯಾಕ್ಕೆ ಕೂಡಲೇ ಸ್ವಾತಂತ್ರ್ಯ ಘೋಷಿಸಬೇಕೆಂದೂ ಪೊಲಿಟ್ ಬ್ಯೂರೋ ಒತ್ತಾಯಿಸಿದೆ.

ದಕ್ಷಿಣ ಆಫ್ರಿಕದ ಎಲ್ಲ ರಾಷ್ಟ್ರಗಳೂ ನಮೀಬಿಯಾದ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಪೊಲಿಟ್‌ಬ್ಯೂರೋ ಮನವಿ ಮಾಡಿದೆ.

ಭಾರತ ಸರ್ಕಾರವು ದಕ್ಷಿಣ ಆಫ್ರಿಕದ ವರ್ಣೀಯ ಸರ್ಕಾರದ ಆಕ್ರಮಣವನ್ನು ತೀವ್ರವಾಗಿ ಖಂಡಿಸಬೇಕು. ಅಂಗೋಲಾದ ಜನತೆಗೆ ಮತ್ತು ನಮೀಬಿಯಾದ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಭಾರತದ ಜನತೆಗೆ ಮಾರ್ಕ್ಸ್‌ವಾದಿ ಪೊಲಿಟ್‌ಬ್ಯೂರೋ ಕರೆ ನೀಡಿದೆ.

●

ಮಹಿಳೆಯರ ಬೃಹತ್ ಮತಪ್ರದರ್ಶನ

ಆಗಸ್ಟ್ 5ರಂದು ದೆಹಲಿಯಲ್ಲಿ ಬೆಲೆಏರಿಕೆಯನ್ನು ಪ್ರತಿಭಟಿಸಿ ವಿವಿಧ ಮಹಿಳಾ ಸಂಘಟನೆಗಳಿಗೆ ಸೇರಿದ ಸುಮಾರು 1 ಸಾವಿರ ಮಹಿಳೆಯರು ಭಾರೀ ಮತಪ್ರದರ್ಶನ ನಡೆಸಿದರು. ಪ್ರದರ್ಶನಕಾರರ ನೇತೃತ್ವವನ್ನು ಕಾಂ. ಸುಶೀಲಾ ಗೋಪಾಲನ್, ಪ್ರಮೀಳಾ ದಂಡವತೆ, ಗಾಯಿತ್ರಿದೇವಿ, ಅಂಬಿಕಾ ಸೋನಿ, ವಿಮಲಾ ರಣದಿವೆ, ವಿಮಲಾ ಪರೂಬಿ ಮತ್ತಿತರರು ವಹಿಸಿದ್ದರು.

ಪೋಲೀಸರು ಮೆರವಣಿಗೆಯನ್ನು ತಡೆಗಟ್ಟಲು ವಿಶ್ವಪ್ರಯತ್ನ ಮಾಡಿದರೂ ಸಫಲರಾಗಲಿಲ್ಲ. ಸುಮಾರು 400 ಪ್ರದರ್ಶನಕಾರರನ್ನು ಬಂಧಿಸಿದರು. ಆರ್ಥಿಕ ಮಂತ್ರಿಗೆ ಮನವಿ ಸಲ್ಲಿಸಲೂ ಅವಕಾಶ ಕೊಡಲಿಲ್ಲ.

●

ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಸಮಾವೇಶ

ಪಂಜಾಬಿನಲ್ಲಿ ಇತ್ತೀಚೆಗೆ ವಿಚ್ಛಿದ್ರಕಾರಿ ಶಕ್ತಿಗಳ ಚಟುವಟಿಕೆ ಜೋರಾಗುತ್ತಿದೆ. "ಖಲಿಸ್ತಾನ್", "ಸಿಖ್ ರಾಷ್ಟ್ರ" ಮತ್ತು "ದೇಶ್ ಪಂಜಾಬ್" ಈ ಮೊದಲಾದ ಗಂಡಾಂತರಕಾರಿ ಘೋಷಣೆಗಳು ಕೇಳಿಬರುತ್ತಿವೆ.

ಈ ಅಪಾಯದ ವಿರುದ್ಧ ಜನರನ್ನು ಸಂಘಟಿಸಲು ಸನ್ನದ್ಧರಾಗಲು 16-8-81ರಂದು ಜಲಂಧರ್‌ನ ಹುತಾತ್ಮ ಮಂದಿರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ಕಾಂಗ್ರೆಸ್ ಪಕ್ಷಗಳ ನೇತೃತ್ವದಲ್ಲಿ ಸಮಾವೇಶವೊಂದನ್ನು ವ್ಯವಸ್ಥೆಗೊಳಿಸಲಾಗಿತ್ತು.

ಸಮಾವೇಶವನ್ನು ಉದ್ಘಾಟಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯ ಕಾಂ. ಹರೇಕಿಶನ್‌ಸಿಂಗ್ ಸುರಜೀತ್‌ರು ಮಾತನಾಡುತ್ತಾ ಖಲೀಸ್ತಾನ್ ಮುಂತಾದ ಘೋಷಣೆಗಳು ಪ್ರಜಾಪ್ರಭುತ್ವ ಚಳುವಳಿಗೇ ಗಂಡಾಂತರಕಾರಿಯಾಗಿವೆ ಎಂದರು. ಅಕಾಲಿ ದಳದ ಒಂದು ಗುಂಪಿನಿಂದ ಪ್ರಾರಂಭವಾದ ಈ ಚಟುವಟಿಕೆಗಳನ್ನು ತಾತ್ವಿಕವಾಗಿಯೇ ಎದುರಿಸಬೇಕೆಂದು ಕಾಂ. ಸುರಜೀತ್ ತಿಳಿಸಿದರು.

ಭಾರತ ಕಮ್ಯುನಿಸ್ಟ್ ಪಕ್ಷದ ಪಂಜಾಬ್ ರಾಜ್ಯ ಕೌನ್ಸಿಲ್ ಕಾರ್ಯದರ್ಶಿ ಕಾಂ. ಅವತಾರ್ ಸಿಂಗ್ ಮಲ್ಹೋತ್ರಾರು ಖಲೀಸ್ತಾನ್ ಘೋಷಣೆಗಳನ್ನು ಖಂಡಿಸುವ ನಿರ್ಣಯವನ್ನು ಮಂಡಿಸಿದರು.

ಸಮಾವೇಶವನ್ನುದ್ದೇಶಿಸಿ ಪಂಜಾಬ್ ಸಿ.ಐ.ಟಿ.ಯು. ಮುಖಂಡ ಕಾಂ. ಜಗಜಿತ್‌ಸಿಂಗ್ ಲಾಯಲ್‌ಪುರಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಜಿ. ಎಸ್. ರಾಂಧ್ವಾ, ಸಿ.ಪಿ.ಐ. ಮುಖಂಡ ಕಾಂ. ಸತ್ಯಪಾಲ್ ಢಂಗ್ ಮೊದಲಾದವರು ಮಾತನಾಡಿದರು.

ಶುಭ ವಿವಾಹ

ಬಿ. ಇ. ಎಲ್. ನ ಕಾರ್ಮಿಕ ಕಾಂ. ಕುಂಜಪ್ಪನ್ ಅವರು ಹೆಚ್. ಎಂ. ಟಿ. ಯ ಕಾರ್ಮಿಕೆ ಕಾಂ. ಸತಿದೇವಿ ಅವರನ್ನು 31-8-81 ರಂದು ಜನಾರ್ಧನ ಹೋಟೆಲ್‌ನಲ್ಲಿ, ಸಿ. ಐ. ಟಿ. ಯು. ಪ್ರೆಸಿಡೆಂಟ್ ಕಾಂ. ಸೂರ್ಯನಾರಾಯಣರಾವ್ ಅವರ ಸಮ್ಮುಖದಲ್ಲಿ ಮದುವೆಯಾಗಿರುತ್ತಾರೆ. ಮದುವೆಯ ಸವಿನೆನಪಿಗೆ ಸಿ. ಪಿ. ಐ. (ಎಂ) ಪಕ್ಷಕ್ಕೆ ರೂ. 101-00 ನ್ನು ಕಾಣಿಕೆ ಸಲ್ಲಿಸಿದ್ದಾರೆ. ಪಕ್ಷವು ಹಾಗೂ ಐಕ್ಯರಂಗವು ನವದಂಪತಿಗಳಿಗೆ ಶುಭವನ್ನು ಹಾರೈಸುತ್ತದೆ. ○

ಕಾರ್ಮಿಕ ಸಂಘದ ವಿಶೇಷ ಸಭೆ

(2ನೇ ಪುಟದಿಂದ)

ರಾವ್ ಅವರು ಮಾತನಾಡುತ್ತಾ ಪ್ರಚಲಿತ ರಾಜಕೀಯ ಪರಿಸ್ಥಿತಿ ಕುರಿತು ತಿಳಿಸಿ, ರಾಷ್ಟ್ರಪತಿಯವರ ಸುಗ್ರೀವಾಜ್ಞೆಯಂತಹ ಕಾರ್ಮಿಕವಿರೋಧಿ ಧೋರಣೆಗಳ ವಿರುದ್ಧ ತೀವ್ರ ಹೋರಾಟ ಮಾಡಲು ಸಿದ್ಧರಾಗುವಂತೆ ಕರೆ ಕೊಟ್ಟರು.

ನಂತರ ಈ ಕೆಳಕಂಡವರನ್ನು ಯೂನಿಯನ್ನಿಗೆ ಪದಾಧಿಕಾರಿಗಳಾಗಿ ಚುನಾಯಿಸಲಾಯಿತು.

ಅಧ್ಯಕ್ಷರಾಗಿ ಕಾಂ. ಸೂರ್ಯನಾರಾಯಣರಾವ್, ಉಪಾಧ್ಯಕ್ಷರುಗಳಾಗಿ ಕಾಂ. ಟಿ. ಎಸ್. ಅನಂತರಾಮ್ ಮತ್ತು ಬೀರಣ್ಣ, ಪ್ರಧಾನಕಾರ್ಯದರ್ಶಿಯಾಗಿ ಕಾಂ. ಆರ್. ಶ್ರೀನಿವಾಸ್, ಕಾಂ. ಟಿ. ಚಂದ್ರಶೇಖರ ಕಾರ್ಯದರ್ಶಿಯಾಗಿ, ಜಂಟಿಕಾರ್ಯದರ್ಶಿಯಾಗಿ ಕಾಂ. ಜಿ. ರಾಮಕೃಷ್ಣ ಮತ್ತು ಖಜಾಂಚಿಯಾಗಿ ಕಾಂ. ಯೋಗಾನಂದರನ್ನೊಳಗೊಂಡ 16 ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲಾಯಿತು.

ಈ ಸಭೆಯಲ್ಲಿ ಸಿ. ಐ. ಟಿ. ಯು. ರಾಜ್ಯಸಮಿತಿ ಮತ್ತು ಜಿಲ್ಲಾಸಮಿತಿಗಳಿಗೆ 2000 ರೂ.ಗಳನ್ನು ನಿಧಿಯನ್ನಾಗಿ ಕೊಡಲಾಯಿತು. ●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154

EDITOR : M. K. BHAT